# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಅಕ್ಟೋಬರ್ 06, 2021

ಸಂಪುಟ : 48 ಸಂಚಿಕೆ : 146 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ಕಬ್ಬು ಬೆಳೆಗಾರರ ಸಮಸ್ಯೆ ಶೀಘ್ರವೇ ಪರಿಹಾರ

ಬೆಂಗಳೂರು, ಅ. 5 - ಕಬ್ಬು ಬೆಳೆಗಾರರು ಆತಂಕಕ್ಕೆ ಒಳಗಾಗುವುದು ಬೇಡ, ಸಮಸ್ಯೆಯನ್ನು ಶೀಘ್ರ ಪರಿಹರಿಸುವುದಾಗಿ ಸಕ್ಕರೆ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪ ಇಂದಿಲ್ಲಿ ತಿಳಿಸಿದ್ದಾರೆ.

**ಬಾಕಿ ಉಳಿಸಿಕೊಂಡು ಸತಾಯಿಸುತ್ತಿದ್ದ ಎರಡು ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ - ಸಚಿವ ಮುನೇನಕೊಪ್ಪ**

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬು ಬೆಳೆಗಾರರಿಗೆ ಪಾವತಿ ಬಾಕಿ ಇಟ್ಟುಕೊಂಡು ಸತಾಯಿಸುತ್ತಿದ್ದ ಎರಡು ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದರು. ಕಾರ್ಖಾನೆ ಮಾಲೀಕರು ಹಾಗೂ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದ್ದೆ. ರೈತರಿಗೆ ಬಾಕಿ ಇರುವ ಹಣ ನೀಡಲು ಸೂಚನೆ (3ನೇ ಪುಟಕ್ಕೆ)

## ಸೇವಾ ವಲಯದಲ್ಲಿ ಉದ್ಯೋಗ ಹೆಚ್ಚಳ

ನವದೆಹಲಿ, ಅ. 5 - ಭಾರತದ ಸೇವಾ ವಲಯ ಸೆಪ್ಟೆಂಬರ್‌ನಲ್ಲಿ ವಿಸ್ತರಣೆ ಯಾಗಿದ್ದು, ಕಳೆದ ಹತ್ತು ತಿಂಗಳಲ್ಲಿ ಮೊದಲ ಬಾರಿಗೆ ಉದ್ಯೋಗ ಹೆಚ್ಚಾಗಿದೆ.

ಇಂಡಿಯಾ ಸರ್ವೀಸ್ ಬ್ಯುಸಿನೆಸ್ ಆಕ್ಟಿವಿಟಿ ಇಂಡೆಕ್ಸ್ ಪ್ರಕಾರ ಸೆಪ್ಟೆಂಬರ್‌ನಲ್ಲಿ ಸೇವಾ ವಲಯದ ಸೂಚ್ಯಂಕ 55.2 ಆಗಿದೆ. ಇದು ಆಗಸ್ಟ್ ತಿಂಗಳಲ್ಲಿ 56.7 ಆಗಿತ್ತು. ಆಗಸ್ಟ್‌ಗೆ ಹೋಲಿಸಿದರೆ ಬೆಳವಣಿಗೆ ಕಡಿಮೆಯಾಗಿದೆ ಯಾದರೂ, ದೀರ್ಘಾವಧಿ ಸರಾಸರಿಗೆ ಹೋಲಿಸಿದರೆ ಹೆಚ್ಚಾಗಿದೆ.

ಬೇಡಿಕೆ ಹೆಚ್ಚಾಗಿರುವ ಕಾರಣ ಸೇವಾ ವಲಯದಲ್ಲಿ (3ನೇ ಪುಟಕ್ಕೆ)

# ಸಂಧ್ಯಾ ಸುರಕ್ಷಾ ಹೆಚ್ಚಳ

## ವಯಸ್ಕರ ಮಾಸಾಶನ 200 ರೂ. ಹೆಚ್ಚಿಸಿದ ಸರ್ಕಾರ

ಬೆಂಗಳೂರು, ಅ. 5 - ಸಂಧ್ಯಾ ಸುರಕ್ಷಾ ಯೋಜನೆಯಡಿ ಹಿರಿಯ ನಾಗರಿಕರಿಗೆ ರೂ. 200 ಪಿಂಚಣಿ ಹೆಚ್ಚಳ, ಪೊಲೀಸ್ ಬಡ್ತಿ ಅವಧಿಯನ್ನು 8 ವರ್ಷದ ಬದಲು 4 ವರ್ಷಕ್ಕೆ ಇಳಿಕೆ ಸೇರಿದಂತೆ ಕೆಲವು ಪ್ರಮುಖ ನಿರ್ಧಾರಗಳನ್ನು ರಾಜ್ಯ ಸಚಿವ ಸಂಪುಟ ತೆಗೆದುಕೊಂಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಸಂಧ್ಯಾ ಸುರಕ್ಷಾ ಯೋಜನೆಯಡಿ, 60 ವರ್ಷದವರಿಗೆ ನೀಡುತ್ತಿರುವ 600 ರೂ. ಮಾಸಾಶನವನ್ನು 800 ರೂ.ಗಳಿಗೆ, 65 ವರ್ಷ ಮೇಲ್ಪಟ್ಟವರಿಗೆ ನೀಡುವ 1000 ಮಾಸಾಶನವನ್ನು 1200 ರೂ.ಕ್ಕೆ ಹೆಚ್ಚಿಸುವ ಸರ್ಕಾರಿ ಆದೇಶ ಹೊರಡಿಸಲು ಸಂಪುಟ ಸಮ್ಮತಿಸಿದೆ ಎಂದರು.

ಇದರಿಂದ 36 ಲಕ್ಷ ಜನರಿಗೆ ಅನುಕೂಲವಾಗಲಿದ್ದು, ಸರ್ಕಾರಕ್ಕೆ 207 ಕೋಟಿ ರೂ. ಹೊರೆಯಾಗಲಿದೆ ಎಂದು ಸಚಿವರು ಹೇಳಿದ್ದಾರೆ.

ಪೊಲೀಸ್ ನೇಮಕಾತಿಗೆ ನಿಯಮಾವಳಿ ರೂಪಿಸಲು ಅನುಮತಿ ದೊರೆತಿದ್ದು, ಪೊಲೀಸ್

**ಪೊಲೀಸ್ ಬಡ್ತಿ ಅವಧಿ 4 ವರ್ಷಗಳಿಗೆ ಇಳಿಕೆ**

ಪೇದೆಯಿಂದ ಸಬ್ ಇನ್ಸ್‌ಪೆಕ್ಟರ್‌ವರೆಗಿನ ಬಡ್ತಿಗೆ 8 ಮತ್ತು 5 ವರ್ಷ ಇತ್ತು. ಇದೀಗ ಇದನ್ನು 4 ವರ್ಷಕ್ಕೆ ಇಳಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದರು.

ಇದರಿಂದ ಪೊಲೀಸ್ ಪೇದೆಯಿಂದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ವರೆಗೆ ಬಡ್ತಿ ಪ್ರಕ್ರಿಯೆ ಇನ್ನಷ್ಟು ಸುಲಭವಾಗಲಿದೆ. 8000 ಸಾವಿರ ಪೊಲೀಸ್ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೀರ್ಮಾನ ಕೈಗೊಂಡಿದ್ದು, ಹಿರಿತನದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಇದರಿಂದ ಬಡ್ತಿ ನೀಡಲು ಸಾಧ್ಯವಾಗುತ್ತದೆ.

ಪೊಲೀಸ್ ಆಧುನೀಕರಣ ಯೋಜನೆಯಡಿ ಬೆಂಗಳೂರಿಗೆ ಅತ್ಯಾಧುನಿಕ ಡಿಜಿಟಲ್ ಸಂಪರ್ಕ ವ್ಯವಸ್ಥೆಗೆ 14.65 ಕೋಟಿ ವೆಚ್ಚದಲ್ಲಿ ವಿನ್ಯಾಸ, ಸರಬರಾಜು, ನಿರ್ವಹಣೆ ಮಾಡಲು ಒಪ್ಪಿಗೆ ನೀಡಿದೆ ಎಂದರು.

ಚಿಕ್ಕಮಗಳೂರು ಜಿಲ್ಲೆ ಬಾಬಾ ಬುಡನ್‌ಗಿರಿಯಲ್ಲಿರುವ ದತ್ತಪೀಠದಲ್ಲಿ ಹಿಂದೂ ಅರ್ಚಕರ ನೇಮಕಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪಿನ ಅನುಷ್ಠಾನಕ್ಕಿರುವ ಸಾಧಕ-ಬಾಧಕಗಳನ್ನು ಬಗ್ಗೆ ಚರ್ಚಿಸಿ, ವರದಿ ಪಡೆಯಲು ಸಂಪುಟದ ಉಪಸಮಿತಿ ರಚಿಸಲು ಸಭೆ ತೀರ್ಮಾನಿಸಿದೆ ಎಂದವರು ಹೇಳಿದ್ದಾರೆ.

ಸಮಿತಿಯಲ್ಲಿ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಕಂದಾಯ ಸಚಿವ ಆರ್. ಅಶೋಕ್, ಇಂಧನ ಸಚಿವ ವಿ. ಸುನೀಲ್‌ಕುಮಾರ್, ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಸದಸ್ಯರಾಗಿರುತ್ತಾರೆ.

ದತ್ತಪೀಠದಲ್ಲಿ ಹಿಂದೂ ಅರ್ಚಕರ ನೇಮಕಕ್ಕೆ ಸಂಬಂಧಿಸಿದಂತೆ ಸಮಿತಿಯೊಂದನ್ನು ರಚಿಸುವಂತೆ ಹೈಕೋರ್ಟ್ ತೀರ್ಪು ನೀಡಿತ್ತು. ಮುಜರಾಯಿ ಇಲಾಖೆಯೇ ಸಮಿತಿ ರಚನೆ ಮಾಡಿ, ಅದರ ಅಭಿಪ್ರಾಯದ ಪ್ರಕಾರ ಅರ್ಚಕರ ನೇಮಕ ಮಾಡಬೇಕೆಂದು ಆರ್‌ಎಸ್‌ಎಸ್ ಒತ್ತಾಯಿಸಿತ್ತು.

## ಕಚ್ಚಾ ತೈಲ ಬ್ಯಾರಲ್‌ಗೆ 82 ಡಾಲರ್‌ಗೆ ಏರಿಕೆ

ನವದೆಹಲಿ, ಅ. 5 – ಕಚ್ಚಾ ತೈಲದ ಬೆಲೆ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಈಗಾಗಲೇ ದಾಖಲೆ ಹಂತದಲ್ಲಿವೆಯಾದರೂ, ಬೆಲೆ ಏರಿಕೆ ಇನ್ನಷ್ಟು ದಿನ ಮುಂದುವರೆಯಲಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 82 ಡಾಲರ್ ಹಂತಕ್ಕೆ ತಲುಪಿದೆ. ಪೆಟ್ರೋಲ್ ಬೆಲೆ ದೇಶಾದ್ಯಂತ 100 ರೂ.ಗಳ ಗಡಿ ದಾಟಿದ್ದರೆ, ಡೀಸೆಲ್ ಬೆಲೆಯೂ ಹಲವೆಡೆ ಲೀಟರ್‌ಗೆ 100 ರೂ.ಗಳ ಹಂತ ದಾಟಿದೆ.

**ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಇನ್ನಷ್ಟು ದಿನ ಮುಂದುವರಿಕೆ**

ತೈಲ ಉತ್ಪಾದನಾ ದೇಶಗಳು ದಿನಕ್ಕೆ 0.4 ದಶಲಕ್ಷ ಬ್ಯಾರಲ್‌ಗಿಂತ ಹೆಚ್ಚು ಉತ್ಪಾದನೆ ಮಾಡದಿರಲು ನಿರ್ಧರಿಸಿವೆ. ಈ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 82.37 ಡಾಲರ್‌ಗಳಿಗೆ ತಲುಪಿದೆ.

ಪ್ರಸಕ್ತ ಪೆಟ್ರೋಲ್ ಹಾಗೂ ಡೀಸೆಲ್ ಉತ್ಪಾದನಾ ಬೆಲೆ ಹಾಗೂ ಮಾರಾಟ ಬೆಲೆಗಳ ನಡುವೆ ಸಾಕಷ್ಟು ವ್ಯತ್ಯಾಸವಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ತೈಲ ಬೆಲೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಕೈಗಾರಿಕಾ ಮೂಲಗಳು ತಿಳಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗಬಹುದು ಎಂಬ ನಿರೀಕ್ಷೆಯಲ್ಲಿ ತೈಲದ ಕಂಪನಿಗಳು ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಕಡಿಮೆ ಮಟ್ಟದಲ್ಲಿರಿಸಿವೆ ಎಂದು ಮೂಲಗಳು ತಿಳಿಸಿವೆ.

ತೈಲ ಕಂಪನಿಗಳು ಇದುವರೆಗೂ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಕಡಿಮೆ ಪ್ರಮಾಣದಲ್ಲಷ್ಟೇ ಏರಿಕೆ ಮಾಡಿವೆ. ಪರಿಸ್ಥಿತಿ ಹೀಗೇ ಮುಂದುವರೆದಲ್ಲಿ ಬೆಲೆಗಳಲ್ಲಿ ಗಣನೀಯ ಏರಿಕೆಯಾಗಲಿದೆ ಎಂದು ಮೂಲಗಳು (3ನೇ ಪುಟಕ್ಕೆ)





## ಭಾರೀ ಮಳೆಗೆ 90 ಎಕರೆ ಭತ್ತದ ಬೆಳೆ ಜಲಾವೃತ

### ಸಂಕ್ಲೀಪುರ, ಗುಳದಹಳ್ಳಿಯಲ್ಲಿ ಭತ್ತದ ಬೆಳೆಗೆ ಹಾನಿ, ಜಿಗಳಿಯಲ್ಲಿ ಮನೆ ಕುಸಿತ

ಮಲೇಬೆನ್ನೂರು, ಅ. 5- ಕಳೆದ 2-3 ದಿನಗಳಿಂದ ಹೋಬಳಿಯಲ್ಲಿ 10ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದ್ದು, 90 ಎಕರೆ ಭತ್ತದ ಬೆಳೆ ಜಲಾವೃತಗೊಂಡಿವೆ.

ದೇವರಬೆಳಕೆರೆ ಪಿಕಪ್ ಡ್ಯಾಂ ಮೈದುಂಬಿ ಹರಿಯುತ್ತಿದ್ದು, ಹಿನ್ನೀರಿನಲ್ಲಿ ಸಂಕ್ಲೀಪುರ ಗ್ರಾಮದ 50 ಎಕರೆ ಮತ್ತು ಗುಳದಹಳ್ಳಿ ಗ್ರಾಮದ 40 ಎಕರೆ ಭತ್ತದ ಬೆಳೆ ಮುಳುಗಡೆಯಾಗಿದೆ.

ಅಲ್ಲದೇ, ಸಂಕ್ಲೀಪುರ-ಮುಕ್ತೇನಹಳ್ಳಿ ಸಂಪರ್ಕ ರಸ್ತೆ ಸೂಳೆಕೆರೆ ಹಳ್ಳದ ನೀರಿನಲ್ಲಿ ಮುಳುಗಿದ್ದು, ವಾಹನಗಳ ಸಂಚಾರ ಬಂದ್ ಆಗಿದೆ.

ಭತ್ತದ ಬೆಳೆ ಜಲಾವೃತಗೊಂಡಿರುವ ಪ್ರದೇಶಕ್ಕೆ ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ ಮತ್ತು ಕೃಷಿ ಅಧಿಕಾರಿ ಇನಾಯತ್ ಭೇಟಿ ನೀಡಿ, ಹಾನಿ ಪರಿಶೀಲಿಸಿದರು.

ಜಿಗಳಿ ಗ್ರಾಮದಲ್ಲಿ ಶ್ರೀಮತಿ ನಿರ್ಮಲಮ್ಮ ಕೋಂ ಎಂ. ಶಿವಕುಮಾರ್ ಅವರ ವಾಸದ ಮನೆ ಕುಸಿದು ಬಿದ್ದಿದ್ದು, ಯಾವುದೇ ಪ್ರಾಣ ಹಾನಿಯಾಗಿಲ್ಲ. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಆಶಾ ಅಣ್ಣಪ್ಪ, ಉಪಾಧ್ಯಕ್ಷ ಮಲ್ಲನಗೌಡ, ಗ್ರಾ.ಪಂ. ಸದಸ್ಯರಾದ ವೈ. ಚೇತನ್ ಕುಮಾರ್, ಎನ್.ಎಂ. ಪಾಟೀಲ್, ಪೂಜಾರ್ (5ನೇ ಪುಟಕ್ಕೆ)

## ಪೆಟ್ರೋಲ್, ಡೀಸೆಲ್ ಬೆಲೆ 6ನೇ ಬಾರಿ ಏರಿಕೆ

ನವದೆಹಲಿ, ಅ. 5 - ಕಚ್ಚಾ ತೈಲದ ಬೆಲೆ 2014ರ ನಂತರ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದ ಹಿನ್ನೆಲೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ದಾಖಲೆ ಹಂತಕ್ಕೆ ತಲುಪಿವೆ. ಪೆಟ್ರೋಲ್ ಬೆಲೆಯನ್ನು ಮಂಗಳವಾರ ಲೀಟರ್‌ಗೆ 25 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 30 ಪೈಸೆ ಹೆಚ್ಚಿಸಲಾಗಿದೆ. ವಾರದಲ್ಲಿ 6ನೇ ಬಾರಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚಿಸಲಾಗಿದೆ.


Get a FREE MEDICAL seat in 2022.
WhatsApp your Name to 8073054295
or Scan this QR Code


## 15 ವರ್ಷದ ಕಾರು ನೋಂದಣಿ ನವೀಕರಣ ಶುಲ್ಕ 8 ಪಟ್ಟು ಹೆಚ್ಚಳ



ನವದೆಹಲಿ, ಅ. 5 – ಮುಂದಿನ ವರ್ಷದ ಏಪ್ರಿಲ್‌ನಿಂದ ಹದಿನೈದು ವರ್ಷಗಳಿಗೂ ಮೀರಿದ ಹಳೆಯ ಕಾರುಗಳ ನೋಂದಣಿ ನವೀಕರಣಕ್ಕಾ ಗಿ ಎಂಟು ಪಟ್ಟು ಹೆಚ್ಚು ಹಣ ನೀಡಬೇಕಾಗಿದೆ.

ಹಳೆಯ ಹಾಗೂ ಮಾಲಿನ್ಯಕಾರಕ ವಾಹನಗಳನ್ನು ಗುಜರಿಗೆ ಹಾಕಲು ಕೇಂದ್ರ ಸರ್ಕಾರ ಯೋಜಿಸಿರುವ ಹಿನ್ನೆಲೆಯಲ್ಲಿ ಈ ಕ್ರಮ ಪ್ರಾಮುಖ್ಯತೆ ಪಡೆದುಕೊಂಡಿದೆ.

ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಅಧಿಸೂಚನೆಯೊಂದನ್ನು ಹೊರಡಿಸಿದ್ದು, ರಾಷ್ಟ್ರೀಯ ಗುಜರಿ ನೀತಿಗೆ ಅನುಗುಣವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ.

ಅಧಿಸೂಚನೆಯ ಪ್ರಕಾರ, ನೋಂದಣಿ ಪ್ರಮಾಣ ಪತ್ರ ನವೀಕರಣಕ್ಕಾಗಿ ಈಗ ಪಾವತಿಸುತ್ತಿರುವ ಹಣಕ್ಕಿಂತ ಎಂಟು ಪಟ್ಟು ಹೆಚ್ಚು ಪಾವತಿಸಬೇಕಿದೆ.

ಪ್ರಸಕ್ತ ಹದಿನೈದು ವರ್ಷಗಳ ಹಳೆಯ ಕಾರಿನ ನೋಂದಣಿ ನವೀಕರಣಕ್ಕೆ 600 ರೂ. ಪಾವತಿಸಬೇಕಿದೆ. ಅದನ್ನು 5,000 ರೂ.ಗಳಿಗೆ ಹೆಚ್ಚಿಸಲಾಗುವುದು. ಬೈಕ್ ನವೀಕರಣ ಶುಲ್ಕವನ್ನು ಈಗಿರುವ 300 ರೂ.ಗಳಿಂದ 1,000 ರೂ.ಗಳಿಗೆ ಹೆಚ್ಚಿಸಲಾಗಿದೆ. 15 ವರ್ಷಗಳ ಹಳೆಯ ಬಸ್‌ನ (3ನೇ ಪುಟಕ್ಕೆ)


**ಚಿರಸ್ಮರಣೆ**



**ದಿ|| ನಲ್ಲೂರು ನರಹರಿ ಸುಬ್ರಾಯ ರೇವಣಕರ್**

ಜನನ : 19.07.1907 ಮರಣ : 16.10.1982

ನೀವು ನಮ್ಮನ್ನಗಲಿ ಇಂದಿಗೆ 39 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ನಲ್ಲೂರು ಬಿ.ಎನ್. ಸರ್ವೋತ್ತಮ್ ರಾವ್ ನರಹರಿ ರೇವಣಕರ್ ಮತ್ತು ಸಹೋದರರು, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ನಲ್ಲೂರು ಕುಟುಂಬ ವರ್ಗದವರು.


## ಕಾಮನ್‌ವೆಲ್ತ್ ಹಾಕಿ: ಪಾಲ್ಗೊಳ್ಳದಿರಲು ಭಾರತದ ನಿರ್ಧಾರ

ನವದೆಹಲಿ, ಅ. 5 – ಮುಂದಿನ ವರ್ಷ ನಡೆಯಲಿರುವ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳದಿರಲು ಭಾರತೀಯ ಹಾಕಿ ತಂಡ ನಿರ್ಧರಿಸಿದೆ. ಕೊರೊನಾ ಕಳವಳ ಹಾಗೂ ಬ್ರಿಟನ್ ಭಾರತೀಯರಿಗೆ ಪಕ್ಷಪಾತಿ ಕ್ವಾರಂಟೈನ್ ನಿಯಮ ರೂಪಿಸಿರುವುದು ಇದಕ್ಕೆ ಕಾರಣವಾಗಿದೆ.

ಭುವನೇಶ್ವರದಲ್ಲಿ ನಡೆಯಲಿರುವ ಪುರುಷರ ಕಿರಿಯರ ವಿಶ್ವಕಪ್‌ನಿಂದ ಇಂಗ್ಲೆಂಡ್ ಹಿಂದೆ ಸರಿಯಲು ಇವೇ ಕಾರಣಗಳನ್ನು ನೀಡಿತ್ತು.

ಬರ್ಮಿಂಗ್‌ಹ್ಯಾಮ್ ಪಂದ್ಯಾವಳಿ ಹಾಗೂ ಹ್ಯಾಂಗ್‌ಝೌ ಏಷಿನ್ ಗೇಮ್ ಪಂದ್ಯಾವಳಿಯ ನಡುವೆ 32 ದಿನಗಳ ಅಂತರವಿದೆ. ಹೀಗಿರುವಾಗ (2ನೇ ಪುಟಕ್ಕೆ)


**ಏಳನೇ ವರ್ಷದ ಪುಣ್ಯಸ್ಮರಣೆ**



**ದಿ. ಶ್ರೀಮಾನ್ ಹೆಚ್.ಡಿ. ಕಲ್ಲಪ್ಪನವರು**

ನಿವೃತ್ತ ಮುಖ್ಯೋಪಾಧ್ಯಾಯರು, ಅತ್ತಿಗೆರೆ.

ಜನನ : 11.05.1943 ಮರಣ : 06.10.2014

ಗುರುವಾಗಿ, ಹರನಾಗಿ ಮಾನವತೆ ಮೇಳೈಸಿ
ನಮಗಾಗಿ ಧರೆಗಿಳಿದು ವಿವೇಕ ನೀಡಿದೆ.
ಪರಮ ಆತ್ಮದ ದಾರ್ಶನಿಕ ದೇವ
ಹಂಸ ನ್ಯಾಯ, ಅಧ್ಯಾತ್ಮದ ಸಾಧಕ,
ಸಪ್ತ ಚಕ್ರಗಳ ನೆಲೆ ಮೀರಿದ ತಂದೆ
ಭರತಮಾತೆ ಗರ್ವ ಪಡುವಂತ
ವಿವೇಕಾನಂದರ ಹರಸಿ ಬೆಳೆಸಿದ
ಪರಮ ಪುರುಷ
ನಿಮಗೆ ನಮ್ಮ ಕೋಟಿ ನಮನ

ಸದಾ ನಿಮ್ಮ ನೆನಪಿನಲ್ಲಿರುವ: ಶ್ರೀ ಕಲ್ಲೇಶಿ ಎ.ಎನ್. ಬಿನ್ ಲೇಟ್ ಶೇಖರಪ್ಪ ಹೆಚ್.ಡಿ., ಶಾಮನೂರು ಹಾಗೂ ಹೊರಟ್ಟಿ ವಂಶಸ್ಥರು, ಅತ್ತಿಗೆರೆ.



**ಕಾರಿಗನೂರು ಶ್ರೀ ಎಸ್.ವಿ. ಕಾಂತಪ್ಪ ಮೇಷ್ಟ್ರು ನಿಧನ**



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, 8ನೇ ಮುಖ್ಯ ರಸ್ತೆ,
ತ್ರಿಶೂಲ್ ಹೋಲ್ ಸೇಲ್ ಲಿಕ್ಕರ್ ಶಾಪ್ ಮಾಲೀಕರಾದ

**ಶರಣ ಎಸ್.ವಿ ಕಾಂತಪ್ಪ ಮೇಷ್ಟ್ರು (ಕಾರಿಗನೂರು)**

ಇವರು ದಿನಾಂಕ 5.10.2021ರ ಮಂಗಳವಾರ ಬೆಳಗ್ಗೆ 7 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 91 ವರ್ಷ ವಯಸ್ಸಾಗಿತ್ತು. ಪುತ್ರ, ಸೊಸೆ, ಮೂವರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 5.10.2021ರ ಮಂಗಳವಾರ ಸಂಜೆ 4ಗಂಟೆಗೆ ಕಾರಿಗನೂರಿನ ಸ್ವಂತ ಜಮೀನಿನಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬ ವರ್ಗ


♦ ಶ್ರೀಮತಿ ವೀಣಾ ಮತ್ತು ಎಸ್.ಕೆ ರವಿ ಮತ್ತು ಮೂವರು ಮೊಮ್ಮಕ್ಕಳು ಹಾಗೂ ಸಹೋದರಿಯರು, ಅಳಿಯಂದಿರುಗಳು ಹಾಗೂ ಬಂಧು ಮಿತ್ರರು.
♦ ಕೆ. ಎಸ್. ವೈನ್ ಲ್ಯಾಂಡ್ ♦ ಶ್ರೀ ರಂಗ ಬಾರ್, ದಾವಣಗೆರೆ
♦ ವಿನಾಯಕ ವೈನ್ಸ್ ಕೂಡ್ಲಿಗೆರೆ, ಭದ್ರಾವತಿ ತಾ.

ಮೊ: 94481 54604

# ರೈತರ ಹತ್ಯೆ, ಬಂಧನ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಜಗಳೂರು, ಸೆ.5- ಉತ್ತರ ಪ್ರದೇಶದಲ್ಲಿನ ರೈತರ ಹತ್ಯೆ ಹಾಗೂ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಅವರ ಬಂಧನ ಖಂಡಿಸಿ ಯುವ ಕಾಂಗ್ರೆಸ್ ನೇತೃತ್ವದಲ್ಲಿ ಪಟ್ಟಣದ ಮಹಾತ್ಮಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು.

ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ ಮಾತನಾಡಿ, ದೇಶದಲ್ಲಿ ಬಿಜೆಪಿ ಸರ್ಕಾರ, ಸರ್ವಾಧಿಕಾರದ ಪರಮಾವಧಿ ಸೃಷ್ಟಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟದ ಹಕ್ಕನ್ನು ಕಸಿಯುವ ಹುನ್ನಾರ ನಡೆಸಿ, ರೈತರನ್ನು ಅಮಾನವೀಯವಾಗಿ ಹತ್ಯೆ ಮಾಡುತ್ತಿದೆ ಎಂದು ಆರೋಪಿಸಿದರು.



ಉತ್ತರಪ್ರದೇಶದ ಲಖಿಮ್‌ಪುರ್ ಖೇರಿ ರೈತರು ಕೇಂದ್ರ ಸರ್ಕಾರ ಜಾರಿಗೆ ತಂದಿರುವ 3 ಕೃಷಿ ಕಾಯ್ದೆಗಳನ್ನು ರದ್ದುಪಡಿಸಲು ಆಗ್ರಹಿಸಿ ನಡೆಸುತ್ತಿದ್ದ ಪ್ರತಿಭಟನಾ ನಿರತರ ಮೇಲೆ ಜೀಪ್ ಹರಿಸಿದ ಪರಿಣಾಮ 4 ಜನ ರೈತರು ಸಾವಿಗೀಡಾಗಿದ್ದಾರೆ.

ಮೃತಪಟ್ಟ ರೈತರ ಕುಟುಂಬಗಳಿಗೆ ಸಾಂತ್ವನ ಹೇಳಲು ಅಲ್ಲಿಗೆ ತೆರಳಿದ್ದ ಪ್ರಿಯಾಂಕ ಗಾಂಧಿ ಅವರನ್ನು ಉತ್ತರ ಪ್ರದೇಶದ

**ಜಗಳೂರು**

ಪೊಲೀಸರು ತಡೆದು ಅಮಾನವೀಯವಾಗಿ ವರ್ತಿಸಿ, ಗೃಹ ಬಂಧನದಲ್ಲಿ ಇಟ್ಟಿರುತ್ತಾರೆ. ಅವರನ್ನು ಕೂಡಲೇ ಬಿಡುಗಡೆಗೊಳಿಸಬೇಕು ಎಂದು ಕಾಂಗ್ರೆಸ್ ಮುಖಂಡ ಕಲ್ಲೇಶ್‌ರಾಜ್ ಪಟೇಲ್ ಒತ್ತಾಯಿಸಿದರು.

ಸಂದರ್ಭದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ತಿಪ್ಪೇಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಕೆಂಚಮ್ಮ ಧನ್ಯಕುಮಾರ್, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಬಿ.ಲೋಕೇಶ್, ರೇವಣ್ಣ, ತಿಪ್ಪೇಸ್ವಾಮಿ, ಶಂಭುಲಿಂಗಪ್ಪ, ಸುರೇಶ್ ನಾಯ್ಕ್ ಹಾಗೂ ಇತರರು ಪಾಲ್ಗೊಂಡಿದ್ದರು.

# ನಿವೃತ್ತ ಅಸಂಘಟಿತ ಕಾರ್ಮಿಕರ ಪ್ರತಿಭಟನೆ



ದಾವಣಗೆರೆ, ಅ.5- ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಿವೃತ್ತ ಅಸಂಘಟಿತ ಕಾರ್ಮಿಕರ ಯೂನಿಯನ್, ಅಖಿಲ ಕರ್ನಾಟಕ ವಯೋವೃದ್ದರ ಒಕ್ಕೂಟ ಮತ್ತು ಬೆಂಬಲಿತ ಕಾರ್ಮಿಕ ಸಂಘಟನೆಗಳ ಸಹಯೋಗದೊಂದಿಗೆ ದಾವಣಗೆರೆ ನೆರಳು ಬೀಡಿ ಕಾರ್ಮಿಕರ ಯೂನಿಯನ್ ವತಿಯಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ನಗರದ ಉಪವಿಭಾಗಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿದ ಪ್ರತಿಭಟನಾಕಾರರು, 40 ವರ್ಷಕ್ಕೂ ಹೆಚ್ಚು ಕಾಲ ದುಡಿದು ತಮ್ಮ ಶ್ರಮವನ್ನು ಸಮಾಜಕ್ಕೆ ಕೊಡುಗೆಯಾಗಿ ಕೊಟ್ಟಿರುವ ನಿವೃತ್ತ ಕಾರ್ಮಿಕರಿಗೆ ಮಾಸಿಕ ಪಿಂಚಣಿಯಾಗಿ 1,200 ನೀಡಲಾಗುತ್ತಿದೆ. ಆದರೆ, ಇದರ ಬದಲು ರಾಷ್ಟ್ರೀಯ ಕನಿಷ್ಠ ಕೂಲಿಯ ಶೇ.50ರಷ್ಟು ಪಿಂಚಣಿಯನ್ನು ನಿಗದಿಪಡಿಸಬೇಕು. ಪಿಂಚಣಿಯು ಅವಶ್ಯಕತೆಗಳು, ಸಾಮಾಜಿಕ ಸ್ವಾವಲಂಬನೆಗೆ ಸಹಾಯಕ ಆಗಿರಬೇಕೆಂದು ಆಗ್ರಹಿಸಿದರು.

ವಯೋವೃದ್ದರಿಗೆ ಕನಿಷ್ಠ 6 ಸಾವಿರ ರೂ. ಪಿಂಚಣಿ ನಿಗದಿಪಡಿಸಬೇಕು. ನಿವೃತ್ತ ಹಿರಿಯ ಕಾರ್ಮಿಕರಿಗೆ ಯಾವುದೇ ಸರ್ಕಾರಿ ಪ್ರಯಾಣದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬಿಪಿ, ಶುಗರ್, ಮೂಳೆ ಸವೆತ ಕಾಯಿಲೆಗಳಿಗೆ ಉಚಿತವಾಗಿ ಮಾತ್ರೆ ನೀಡಬೇಕು. ಅಲ್ಲದೇ ಅವರ ಮನೆ ಬಾಗಿಲಿಗೆ ಔಷಧಿಗಳನ್ನು ತಲುಪಿಸುವ ಜವಾಬ್ದಾರಿ ಸರ್ಕಾರದ್ದಾಗಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಬುಸಾಬ್, ಖಮರುನ್ನೀಸಾ, ಸಬ್ರಿನ್‌ತಾಜ್, ಜಬೀನಾ ಖಾನಂ, ಎಂ. ಕರಿಬಸಪ್ಪ ಸೇರಿದಂತೆ ಇತರರು ಇದ್ದರು.

# ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಗೌರವ ಸಮರ್ಪಣೆ



ದಾವಣಗೆರೆ, ಅ. 5- ಜ್ಞಾನಜ್ಯೋತಿ ವನಿತಾ ಶಿಕ್ಷಕಿಯರ ವೇದಿಕೆ ವನಿತಾ ಸಮಾಜ ಹಾಗೂ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ಜ್ಞಾನಜ್ಯೋತಿ ವನಿತಾ ಶಿಕ್ಷಕಿಯರ ವೇದಿಕೆ ವನಿತಾ ಸಮಾಜ ಹಾಗೂ ಈಶ್ವರಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮೌಲ್ಯ ಶಿಕ್ಷಣ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಜ್ಞಾನಜ್ಯೋತಿ ಉತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾದ ಈಶ್ವರಮ್ಮ ಶಾಲೆಯ ಉಪ ಪ್ರಾಂಶುಪಾಲರಾದ ಶಶಿರೇಖಾ, ಸೇಂಟ್ ಪಾಲ್ಸ್ ಶಾಲೆಯ ಶಿಕ್ಷಕಿ ಬಿ.ಆರ್. ರಾಗಿಣಿ ಹಾಗೂ ಚನ್ನಗಿರಿ ತಾಲ್ಲೂಕಿನ ಭುವನೇಶ್ವರಿ ಅವರನ್ನು ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ರುಪ್ಸಾ ಕೊಡಮಾಡುವ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುವ ಈಶ್ವರಮ್ಮ ಶಾಲೆಯ ಪ್ರಾಂಶುಪಾಲರಾದ ಕೆ.ಎಸ್. ಪ್ರಭುಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಶಾಲೆಯ ಅಧ್ಯಕ್ಷರಾದ ಸುಜಾತ ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಡಯಟ್ ಪ್ರಾಚಾರ್ಯರಾದ ಹೆಚ್.ಕೆ. ಲಿಂಗರಾಜ್, ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ, ಮಲ್ಲಮ್ಮ ನಾಗರಾಜ್, ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಪಿ. ಬಸವಕುಮಾರಯ್ಯ, ನಿವೃತ್ತ ಶಿಕ್ಷಕ ಜಿ.ಆರ್. ಷಣ್ಮುಖಪ್ಪ, ನೀಲಗುಂದ ಜಯ್ಯಮ್ಮ, ಅರುಂಧತಿ ರಮೇಶ್, ವಾಗ್ದೇವಿ ಮತ್ತಿತರರು ಉಪಸ್ಥಿತರಿದ್ದರು.

# ನಾನು ಹರಪನಹಳ್ಳಿ ಕ್ಷೇತ್ರದ ಆಕಾಂಕ್ಷಿಯಲ್ಲ : ಲಾಡ್

ಹರಪನಹಳ್ಳಿ, ಅ.5- ಕೊರೊನಾದಿಂದ ಕಂಗೆಟ್ಟ ರೈತ ಹಾಗೂ ಕೃಷಿ ಕಾರ್ಮಿಕರ, ಜನ ಸಾಮಾನ್ಯರ ಹಸಿವು ನೀಗಿಸುವುದು ಉಚಿತ ಊಟದ ಕ್ಯಾಂಟೀನ್ ಉದ್ದೇಶವಾಗಿದೆ ಎಂದು ತಿಳಿಸಿರುವ ಮಾಜಿ ಸಚಿವ ಸಂತೋಷ್ ಲಾಡ್, ನಾನು ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿಯಲ್ಲ ಎಂದು ಸ್ಪಷ್ಟಪಡಿಸಿದರು.

ಪಟ್ಟಣದ ವಾಲ್ಮೀಕಿ ನಗರದ ಹಾಲಸ್ವಾಮಿ ಮಠಕ್ಕೆ ಸೌಹಾರ್ದಯುತ ಭೇಟಿ ನೀಡಿ, ಗದ್ದುಗೆ ದರ್ಶನ ಮಾಡಿ ಮಾಧ್ಯಮ ಮಿತ್ರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಪಕ್ಷದ ಬಲವರ್ಧನೆ ಮಾಡುವ ಸಲುವಾಗಿ ಕ್ಷೇತ್ರದಲ್ಲಿ ಸಂಚರಿಸುತ್ತಿದ್ದು, ಸಂತೋಷ್ ಲಾಡ್ ಫೌಂಡೇಷನ್‌ನಿಂದ ಸಾಮಾಜಿಕ ಕೆಲಸ ಮಾಡುತ್ತಿದ್ದೇನೆಯೇ ಹೊರತು ಇನ್ನಾವುದೇ ಬೇರೆ ಉದ್ದೇಶವಿಲ್ಲ ಎಂದು ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಮೊದಲ ಬಾರಿಗೆ ಕಲಘಟಗಿಯಲ್ಲಿ ಕ್ಯಾಂಟೀನ್ ತೆರೆದಿದ್ದು, ನಂತರ ನನ್ನ ಸ್ನೇಹಿತರ ಆಶಯದಂತೆ ಬಳ್ಳಾರಿ, ಕುಡಿತಿನಿ, ಸಂಡೂರು, ಕೂಡ್ಲಿಗಿ ಹಾಗೂ



ಹರಪನಹಳ್ಳಿ ಸೇರಿದಂತೆ 9 ಕಡೆ ಕ್ಯಾಂಟೀನ್ ತೆರೆದಿದ್ದು, ದಿನನಿತ್ಯ 13 ಸಾವಿರ ಜನ ಊಟ ಮಾಡುತ್ತಿದ್ದಾರೆ.ಈಗಾಗಲೇ ಅಂದಾಜು 10 ಲಕ್ಷ ಜನರಿಗೆ ಉಚಿತವಾಗಿ ಆಹಾರ ವಿತರಣೆ ಮಾಡಿದ್ದೇವೆ ಎಂದ ಅವರು, ಆಹಾರ ವಿತರಣೆಗೆ ದಿನನಿತ್ಯ ಒಟ್ಟು 2ಲಕ್ಷ ರೂ. ವ್ಯಯ ವಾಗುತ್ತಿದ್ದು ಎಲ್ಲಿಯವರೆಗೆ ಆಹಾರ ವಿತರಣೆ ಮಾಡಲು ನನ್ನಿಂದ ಸಾಧ್ಯವಾಗುತ್ತದೆಯೋ ಅಲ್ಲಿಯವರೆಗೆ ವಿತರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಅವರು ವಿವರಿಸಿದರು.

ಬಳಿಕ ನವರಾತ್ರಿ ಹಬ್ಬದ ಅಂಗವಾಗಿ ತಾಲ್ಲೂಕಿನ ಅನಂತನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಮನೆ ಮನೆಗೆ ಬಣ್ಣ ಎನ್ನುವ ವಿಶಿಷ್ಟ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಹಾಲಸ್ವಾಮಿ ಮಠದ ಶ್ರೀ ಸಣ್ಣ ಹಾಲಸ್ವಾಮಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚಂಗೆಪ್ಪ, ಚಿಗಟೇರಿ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಾಸ್ವಿಹಳ್ಳಿ ನಾಗರಾಜ್, ಪುರಸಭೆ ಮಾಜಿ ಸದಸ್ಯ ಅರುಣ್ ಪೂಜಾರ್, ಅಡವಿಹಳ್ಳಿ ಗ್ರಾ.ಪಂ. ಸದಸ್ಯ ಪೂಜಾರ್ ಪ್ರಸನ್ನ, ಮುಖಂಡರಾದ ಇರ್ಫಾನ್ ಮುದುಗಲ್, ತೆಲಿಗಿ ಟಿ.ಮಂಜುನಾಥ್, ತೆಲಿಗಿ ಉಮಾಕಾಂತ್, ತಿಪ್ಪನಾಯಕನಹಳ್ಳಿ ತಿಮ್ಮಣ್ಣ, ಸುರೇಶ್ ಮಂಡಕ್ಕಿ, ರಾಯದುರ್ಗದ ದುರುಗಪ್ಪ, ಹೆಚ್.ಬಾಲಾಜಿ, ಅಣ್ಣೇಶ್, ಪಿ.ಹಾಲೇಶ್, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಡಿ. ಜೀಷಾನ್, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಸಾಧಿಕ್ ಸಾಲಮೂರಳ್ಳಿ, ತಿಮ್ಮಲಾಪುರ ಕೃಷ್ಣ, ಎನ್.ಎಸ್.ಯು.ಐ. ಅಧ್ಯಕ್ಷ ಶ್ರೀಕಾಂತ ಯಾದವ, ಕಾರ್ಯದರ್ಶಿ ಡಂಕಿ ವಾಸಿಂ ಸೇರಿದಂತೆ ಮತ್ತಿತರರು ಇದ್ದರು.

> “ಸಂತೋಷ್ ಲಾಡ್ ಫೌಂಡೇಷನ್‌ನಿಂದ ಸಾಮಾಜಿಕ ಕೆಲಸ ಮಾಡುತ್ತಿದ್ದೇನೆಯೇ ಹೊರತು ಇನ್ನಾವುದೇ ಬೇರೆ ಉದ್ದೇಶವಿಲ್ಲ.
>
> - **ಸಂತೋಷ್ ಲಾಡ್**, ಮಾಜಿ ಸಚಿವ

# ಜಿಎಂಐಟಿ 21ನೇ ಸಂಸ್ಥಾಪನಾ ದಿನ

ದಾವಣಗೆರೆ, ಅ.5- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ 21ನೇ ಸಂಸ್ಥಾಪನಾ ದಿನಾಚರಣೆಯನ್ನು ಮೊನ್ನೆ ಆಚರಿಸಲಾಯಿತು.

ಕಾಲೇಜಿನ ಛೇರ್ಮನ್ ಜಿ.ಎಂ. ಲಿಂಗರಾಜು ಧ್ವಜಾರೋಹಣ ನೆರವೇರಿಸಿ, ಉದ್ಘಾಟಿಸಿದರು. ಸಂಸ್ಥೆಯ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ನಿರಂತರವಾಗಿ ಶ್ರಮಿಸುತ್ತಾ ಬಂದಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್, ಕಂಪ್ಯೂಟರ್ ಸೈನ್ಸ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಂ. ಸಂತೋಷ್ ಕುಮಾರ್, ಮೆಕ್ಯಾನಿಕಲ್ ವಿಭಾಗದ ಪ್ರಾಧ್ಯಾಪಕ ಡಾ. ಡಿ.ಜಿ. ರಾಜಕುಮಾರ್ ಮಾತನಾಡಿದರು.

ಆಡಳಿತ ಮಂಡಳಿ ಪ್ರತಿನಿಧಿ ವೈ.ಯು. ಸುಭಾಷ್‌ಚಂದ್ರ, ಜಿ.ಎಂ. ಪಾಲಿಟೆಕ್ನಿಕ್ ಪ್ರಾಂಶುಪಾಲ ಡಾ. ಬಿ.ಆರ್. ಶ್ರೀಧರ್ ಮತ್ತಿತರರು ಹಾಜರಿದ್ದರು.

ಇ ಅಂಡ್ ಸಿ ವಿಭಾಗದ ಸಹಾಯಕ ಪ್ರಾಧ್ಯಾಪಕ ವಿಕಾಸ್ ಯತ್ನಳ್ಳಿ ನಿರೂಪಿಸಿದರು. ಐ.ಎಸ್. ವಿಭಾಗದ ಸಹಾಯಕ ಪ್ರಾಧ್ಯಾಪಕ ಅಮಿತ್ ಶೇಖರ್ ಪ್ರಾರ್ಥಿಸಿದರು. ರಾಸಾಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವಿ.ಎಸ್. ಬೆಟಗೇರಿ ಸ್ವಾಗತಿಸಿದರು. ಬಯೋಟೆಕ್ನಾಲಜಿ ವಿಭಾಗದ ಪ್ರಾಧ್ಯಾ ಪಕ ಡಾ. ಎಚ್. ಗುರುಮೂರ್ತಿ ವಂದಿಸಿದರು.

# ಕಿತ್ತೂರು ರಾಣಿ ಚೆನ್ನಮ್ಮ ಮತ್ತು ವೀರ ಮಹಿಳೆ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಅ.5- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ವೀರ ಮಹಿಳೆ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಸ್ವಯಂ ಸೇವಾ ಸಂಸ್ಥೆ ಹಾಗೂ ವ್ಯಕ್ತಿಗಳು ಮಹಿಳೆಯರ ಅಭಿವೃದ್ಧಿಗಾಗಿ ಕನಿಷ್ಟ 5 ವರ್ಷಗಳ ಸೇವೆ ಸಲ್ಲಿಸಿರಬೇಕು. ವೀರ ಮಹಿಳೆ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು 18 ರಿಂದ 45 ವಯೋಮಿತಿಯೊಳಗಿರಬೇಕು.

ಅರ್ಜಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರಿ ಬಾಲಕರ ಬಾಲಮಂದಿರ ಕಟ್ಟಡ, 14ನೇ ಮುಖ್ಯ ರಸ್ತೆ, ಕುವೆಂಪುನಗರ, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ ಈ ಕಚೇರಿಗೆ ಅಕ್ಟೋಬರ್ 11 ರೊಳಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ಮಾಹಿತಿಗಾಗಿ ದೂ.08192-264056 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾಲ್ಗೊಳ್ಳದಿರಲು ಭಾರತದ ನಿರ್ಧಾರ

**(1ನೇ ಪುಟದಿಂದ)** ಕೊರೊನಾದಿಂದ ಅತಿ ಹೆಚ್ಚು ಪೀಡಿತವಾಗಿರುವ ದೇಶಗಳಲ್ಲಿ ಒಂದಾದ ಬ್ರಿಟನ್‌ಗೆ ಆಟಗಾರರನ್ನು ಕಳಿಸುವುದು ಅಪಾಯಕಾರಿ ಎಂದು ಹಾಕಿ ಇಂಡಿಯ ಅಧ್ಯಕ್ಷ ಗ್ಯಾನೇಂದ್ರೊ ನಿಂಗೊಂಬಮ್ ಹೇಳಿದ್ದಾರೆ.

# ನಾಗಮ್ಮ ನಿಧನಕ್ಕೆ ಗೋವಿಂದರಾಜ್ ಶೋಕ

ದಾವಣಗೆರೆ,ಅ.5- ನಗರ ಪಾಲಿಕೆ ಆಶ್ರಯ ಶಾಖೆಯ ವ್ಯವಸ್ಥಾಪಕ ಎನ್. ಗೋವಿಂದನಾಯ್ಕ ಅವರ ತಾಯಿ ಶ್ರೀಮತಿ ನಾಗಮ್ಮ ನಾನಾನಾಯ್ಕ ಅವರ ನಿಧನಕ್ಕೆ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್, ಜಂಟಿ ಕಾರ್ಯದರ್ಶಿ ಎಸ್.ಕೆ. ಪಾಂಡುರಾಜ್ ಸಂತಾಪ ವ್ಯಕ್ತಪಡಿಸಿದ್ದಾರೆ.

# ಶರೀರದ ಸದೃಢತೆಗೆ ಪರಿಸರ ಸ್ವಚ್ಛವಾಗಿರಬೇಕು

**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಮಂಗಳೂರಿನ ರಾಮಕೃಷ್ಣಾಶ್ರಮದ ಶ್ರೀ ಏಕಗಮ್ಯಾನಂದಜಿ**

ರಾಣೇಬೆನ್ನೂರು, ಅ.5- ಆಧುನಿಕ ತಂತ್ರಜ್ಞಾನ ಉಪಯೋಗಿಸಿ, ತ್ಯಾಜ್ಯವನ್ನು ಜೈವಿಕ ಗೊಬ್ಬರದ ಜೊತೆಗೆ, ವಿವಿಧ ರೂಪಗಳ ಪರಿವರ್ತಿತ ಯೋಜನೆಗಳಿಂದ ನಗರ ಸ್ವಚ್ಛತೆ ಹಾಗೂ ನಗರಸಭೆ ಆದಾಯ ಹೆಚ್ಚಿಸಿಕೊಳ್ಳಬಹುದು ಎಂದು ಮಂಗಳೂರು ರಾಮಕೃಷ್ಣಾಶ್ರಮದ ಸ್ವಾಮಿ ಏಕಗಮ್ಯಾನಂದಜಿ ಸಲಹೆ ನೀಡಿದ್ದಾರೆ.

ಸ್ವಾಮೀಜಿ ರಾಣೇಬೆನ್ನೂರು ನಗರವನ್ನು ಸ್ವಚ್ಛ ಹಾಗೂ ಸುಂದರಗೊಳಿಸಲು ನಗರಸಭೆಯಲ್ಲಿ ನಡೆದ ಚಿಂತನಾ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು.

ಸದೃಢ ಶರೀರದಲ್ಲಿ ಸದೃಢ ಮನಸ್ಸು ಇರುತ್ತದೆ. ಶರೀರ ಸದೃಢಗೊಳ್ಳಲು ನಾವು ವಾಸಿಸುವ ಪರಿಸರ ಸ್ವಚ್ಛವಾಗಿರಬೇಕು. ಸ್ವಚ್ಛ ಹಾಗೂ ಸುಂದರವಾದ ಈ ಅಭಿಯಾನದಲ್ಲಿ ಸ್ಥಳೀಯ ಸಂಘ - ಸಂಸ್ಥೆಗಳು, ಯುವಕರು, ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯೊಂದಿಗೆ ಪಾಲ್ಗೊಳ್ಳುವುದು ಅವಶ್ಯವಿದೆ ಎಂದು ಸ್ವಾಮೀಜಿ ತಿಳಿಸಿದರು.

ಮಂಗಳೂರು ಮಹಾನಗರದ ಸ್ವಚ್ಛತೆಗೆ ಕೈಗೊಳ್ಳಲಾದ ಕಾರ್ಯಕ್ರಮಗಳ ಬಗ್ಗೆ ವಿವರಿಸಿದ ಸ್ವಾಮೀಜಿ, ನಗರಸಭೆ ಸದಸ್ಯರು ಮುತುವರ್ಜಿ ವಹಿಸಿ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ವಾರದಲ್ಲಿ ಎರಡು ಗಂಟೆ ಸ್ವಚ್ಛತೆ ಕಾರ್ಯ ಕೈಗೊಳ್ಳಬೇಕು. ಈ ಕಾರ್ಯಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಪಾತ್ರ ಸಹ ಅವಶ್ಯವಿದೆ. ಸರ್ಕಾರಿ ಕಛೇರಿಗಳು, ಶಾಲಾ-ಕಾಲೇಜು, ಪ್ಲೈ ಓವರ್ ಗಳ ಗೋಡೆಗಳ ಮೇಲೆ ನಗರಸಭೆ ಹಾಗೂ ಸರ್ಕಾರ ನೀಡುವ ಮಾಹಿತಿಯನ್ನು ಬರೆಸಬೇಕು ಎಂದರು.

ಸಭೆಯಲ್ಲಿ ಇಲ್ಲಿನ ವಿವೇಕಾನಂದಾಶ್ರಮದ ಪ್ರಕಾಶಾನಂದಜಿ ಮಹಾರಾಜ್, ಶಾಸಕ ಅರುಣ್‌ಕುಮಾರ್ ಪೂಜಾರ್, ನಗರಾಧ್ಯಕ್ಷರಾದ ರೂಪಾ ಚಿನ್ನಿಕಟ್ಟಿ, ಪೌರಾಯುಕ್ತ ಉದಯಕುಮಾರ್ ಹಾಗೂ ನಗರಸಭೆ ಸದಸ್ಯರು ಪಾಲ್ಗೊಂಡಿದ್ದರು.

# ಬಿಜೆಪಿ ಮುಖಂಡರಿಂದ ಫುಡ್ ಕಿಟ್ ವಿತರಣೆ : ಆಕ್ಷೇಪ



ಮಲೇಬೆನ್ನೂರು, ಅ. 5- ಕಾರ್ಮಿಕ ಇಲಾಖೆ ವತಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ನೀಡುವ ಫುಡ್ ಕಿಟ್‌ಗಳನ್ನು ಹರಿಹರ ತಾಲ್ಲೂಕಿನಲ್ಲಿ ಬಿಜೆಪಿ ಮುಖಂಡರು ಹಳ್ಳಿ ಹಳ್ಳಿಗೆ ತೆರಳಿ ವಿತರಿಸುತ್ತಿರುವುದನ್ನು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಖಂಡಿಸಿದ್ದಾರೆ.

ಸರ್ಕಾರದ ಫುಡ್‌ಕಿಟ್‌ಗಳನ್ನು ಶಾಸಕರು, ಸಂಸದರು ವಿತರಿಸಬೇಕು. ಆದರೆ, ಕೊಮಾರನಹಳ್ಳಿಯಲ್ಲಿ ಮೊನ್ನೆ ಬಿಜೆಪಿ ಬಾವುಟಗಳನ್ನು ಕಟ್ಟಿಕೊಂಡು ಕಟ್ಟಡ ಕಾರ್ಮಿಕರಿಗೆ ಸ್ಥಳೀಯ ಶಾಸಕರನ್ನು ಕರೆಯದೇ ಬಿಜೆಪಿ ಮುಖಂಡರು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ನಿಖಿಲ್ ಆಕ್ಷೇಪಿಸಿದ್ದಾರೆ.

ಹನಗವಾಡಿ ವೀರೇಶ್ ಮತ್ತಿತರರು ಹಳ್ಳಿ-ಹಳ್ಳಿಗೆ ತೆರಳಿ ಕಾರ್ಮಿಕ ಇಲಾಖೆಯ ಕಿಟ್‌ಗಳನ್ನು ವಿತರಿಸುತ್ತಿದ್ದಾರೆ. ಅವರು ಸರ್ಕಾರದ ಯಾವ ಅಧಿಕಾರದಲ್ಲಿದ್ದಾರೆಂದು? ಪ್ರಶ್ನಿಸಿರುವ ನಿಖಿಲ್, ಇದಕ್ಕೆ ಅವಕಾಶ ನೀಡಿದ ಕಾರ್ಮಿಕ ಇಲಾಖೆಯ ಅಧಿಕಾರಿಗಳ ವಿರುದ್ಧ ಡಿಸಿಗೆ ದೂರು ನೀಡಿದ್ದಾರೆ.

# ಮಕ್ಕಳಲ್ಲಿನ ತೊದಲುವಿಕೆ ನಿವಾರಣೆ 10 ರಂದು ಕಾರ್ಯಾಗಾರ

ದಾವಣಗೆರೆ, ಸೆ.5- ಮಕ್ಕಳ ತೊದಲುವಿಕೆ ನಿವಾರಣೆ ಬಗ್ಗೆ ನಗರದ ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಕ್ವೆಸ್ಟ್ ಸ್ಪೀಚ್ ಅಂಡ್ ಹೀಯರಿಂಗ್ ಸೆಂಟರ್ ತನ್ನ ಸಿ.ಬಿ.ಆರ್. ಕಾರ್ಯಕ್ರಮದಡಿ ಕಾರ್ಯಾಗಾರವನ್ನು ಇದೇ ದಿನಾಂಕ 10ರ ಭಾನುವಾರ ಬೆಳಿಗ್ಗೆ 10.30 ರಿಂದ 1.30ರವರೆಗೆ ಹಾಗೂ 2.30 ರಿಂದ 4 ಗಂಟೆವರೆಗೆ ಸ್ಥಳೀಯ ಲಯನ್ಸ್ ಭವನದಲ್ಲಿ ಸಂಘಟಿಸಿದೆ.

ಕಾರ್ಯಾಗಾರದಲ್ಲಿ ಮಗುವಿನ ತೊದಲುವಿಕೆಗೆ ಕೆಲ ಚಿಕಿತ್ಸೆಗಳು, ವ್ಯಾಯಾಮಗಳು, ಉಸಿರಾಟದ ವಿಧಗಳು ಹಾಗೂ ಈ ಸಮಸ್ಯೆಯಿಂದ ಹೊರ ಬರಲು ಮನೆಯಲ್ಲಿಯೇ ಅಭ್ಯಾಸ ಮಾಡಬಹುದಾದ ವ್ಯಾಯಾಮಗಳನ್ನು ಪರಿಚಯಿಸಲಾಗುತ್ತದೆ.

ಮಕ್ಕಳಲ್ಲಿ ತೊದಲುವಿಕೆಯು ಸರ್ವೇ ಸಾಮಾನ್ಯವಾಗಿ ಕಂಡು ಬರುತ್ತದೆ. ಇದರಲ್ಲಿ ಶೇ.1ರಷ್ಟು ಪ್ರಾಯದ ವಯಸ್ಸಿನಲ್ಲೂ ಉಳಿಯುತ್ತದೆ. ನರಗಳ ಊತದಿಂದ ಅಥವಾ ಮಾನಸಿಕ ಒತ್ತಡದಿಂದ ತೊದಲುವಿಕೆ ಉಂಟಾಗುತ್ತದೆ.

ತೊದಲುವಿಕೆ ನೈಸರ್ಗಿಕ ಪ್ರಕ್ರಿಯೆ ಎಂದು ಭಾವಿಸಬೇಕಿದೆ. ಈ ಸಮಸ್ಯೆಯಿಂದ ಹೊರ ಬರಲು ವಿಜ್ಞಾನವು ಹಲವಾರು ರೋಗ ನಿವಾರಣೆ ಹಾಗೂ ಚಿಕಿತ್ಸೆಗಳನ್ನು ಸಮಾಜಕ್ಕೆ ಕಾಣಿಕೆಯಾಗಿ ಕೊಟ್ಟಿದೆ. ಇದೇ ದಿನಾಂಕ 10ರಂದು ನಡೆಯುವ ಕಾರ್ಯಾಗಾರದಲ್ಲಿ ತೊದಲುವಿಕೆ ಸಮಸ್ಯೆಯು ಮಕ್ಕಳಲ್ಲಿ ಕಂಡು ಬಂದಾಗ ಪೋಷಕರ ಕರ್ತವ್ಯವೇನು? ಯಾವುದನ್ನು ಮಾಡಬೇಕು ಹಾಗೂ ಯಾವುದನ್ನು ಮಾಡಬಾರದು ಎಂಬುದರ ಬಗ್ಗೆ ತಿಳಿಸಲಾಗುತ್ತದೆ.

ವಾಕ್ ಮತ್ತು ಶ್ರವಣ ದೋಷ ತಜ್ಞರೂ, ಎಸ್.ಎಲ್.ಪಿ. ಆದ ಡಾ.ಸುಬ್ಬರಾಜು ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಆಸಕ್ತ ಪೋಷಕರು, ಶಿಕ್ಷಕರು ಹಾಗೂ ಸಮಾಜ ಸೇವಕರೂ ಸಹ ಭಾಗವಹಿಸಬಹುದಾಗಿದೆ.

# ನಲ್ಪಾಡ್ ಹೇಳಿಕೆಗೆ ಬಿಜೆಪಿ ಯುವ ಮೋರ್ಚಾ ಖಂಡನೆ

ದಾವಣಗೆರೆ, ಸೆ.5- ಹರಿಹರದ ಗಾಂಧಿ ವೃತ್ತದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಆಯೋಜಿಸಿದ್ದ ಸಾಂಕೇತಿಕ ಉಪವಾಸ ಸತ್ಯಾಗ್ರಹದಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ಮಹಮ್ಮದ್ ಹ್ಯಾರಿಸ್ ನಲ್ಪಾಡ್ ನೀಡಿರುವ ಹೇಳಿಕೆಗಳನ್ನು ಬಿಜೆಪಿ ಯುವ ಮೋರ್ಚಾ ಖಂಡಿಸಿದೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ಎಲ್. ಶಿವಪ್ರಕಾಶ್, ಬಿಜೆಪಿ ದೇಶವನ್ನು ಮಾರಲು ಹೊರಟಿದೆ ಎಂದು ನಲ್ಪಾಡ್ ಹೇಳಿದ್ದಾರೆ. ಅವರು ಮೊದಲು ಕಾಂಗ್ರೆಸ್ ಪಕ್ಷದ ಇತಿಹಾಸ ಅರಿಯಬೇಕು. 1991ರಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ವಿದೇಶಿ ವಿನಿಮಯದ ಕೊರತೆ ಉಂಟಾದಾಗ ಭಾರತದಲ್ಲಿದ್ದ 47 ಟನ್ ಬಂಗಾರದಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್‌ಗೆ 20 ಟನ್ ಬಂಗಾರವನ್ನು ಯೂಯನಿಯನ್ ಬ್ಯಾಂಕ್ ಆಫ್ ಸ್ವಿಟ್ಜರ್‌ಲ್ಯಾಂಡ್‌ಗೆ ಮಾರಿದ್ದನ್ನು ನೆನಪಿಸಿಕೊಳ್ಳಲಿ ಎಂದರು.

ಗಾಂಧಿ ಜಯಂತಿಯನ್ನು ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಹರಿಹರದ ತುಂಗಭದ್ರಾ ನದಿ ತೀರ ಸ್ವಚ್ಛತೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದ್ದಾರೆ. ಆದರೆ ಕಾಂಗ್ರೆಸ್ ನಾಯಕರು ಊಟ ಮಾಡಿದ ತಟ್ಟೆ, ಲೋಟಗಳನ್ನು ರಸ್ತೆಗೆ ಎಸೆದು ಗಾಂಧೀಜಿ ಅವರ ಆದರ್ಶಗಳಿಗೆ ಅಪಮಾನ ಮಾಡಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ರಾಕೇಶ್, ರವಿ ರಾಯ್ಕರ್, ಮಂಜುನಾಥ್, ವಿನಯ್, ನರೇಂದ್ರ, ತಿಲಕ್, ಸಚಿನ್ ವರ್ಣೇಕರ್ ಮೊದಲಾದವರಿದ್ದರು.

# ಪರೀಕ್ಷೆ ಬರೆಯಲು ಕೊನೆಯ ಅವಕಾಶ

ದಾವಣಗೆರೆ, ಅ.5- ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ದ್ವಿಗುಣ ಅವಧಿ ಪೂರ್ಣಗೊಳಿಸಿ ಪದವಿ ವಂಚಿತ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅಂತಿಮ ಅವಕಾಶ ನೀಡಲಾಗಿದೆ.


ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕ ಪದವಿಗಳಿಗೆ 2003-04 ರಲ್ಲಿ ಹಾಗೂ ಆ ನಂತರ ಪ್ರವೇಶ ಪಡೆದ ಸೆಮಿಸ್ಟರ್ ಸ್ಕೀಂನಲ್ಲಿ ಅಧ್ಯಯನ ಮಾಡಿ, ಕೋರ್ಸ್ ಪೂರ್ಣಗೊಳಿಸಲು ನಿಗದಿಪಡಿಸಲಾಗಿದ್ದ ಅವಧಿ ಮುಗಿದರೂ ಸಹ, ಈವರೆಗೂ ಪದವಿ ಪೂರ್ಣಗೊಳಿಸಲಾಗದೆ, ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಕೊನೆಯ ಅವಕಾಶವನ್ನು ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳು www.kuvempu.ac.in ವೆಬ್‌ಸೈಟ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಜನವರಿ, ಫೆಬ್ರವರಿ 2022ರ ಮಾಹೆಯಲ್ಲಿ ನಡೆಸಲು ಯೋಜಿಸಲಾಗಿದೆ. ಅಕ್ಟೋಬರ್-2021 ರ ಮೊದಲ ವಾರದಿಂದ ಆನ್‌ಲೈನ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿಸಲು ಅವಕಾಶ ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 08282-256166, 70222 54997 ಕ್ಕೆ ಸಂಪರ್ಕಿಸಬಹುದು ಎಂದು ಕುವೆಂಪು ವಿವಿ. ಮೌಲ್ಯಮಾಪನ ಕುಲಸಚಿವ ಪ್ರೊ. ಸಿ.ಎಂ.ತ್ಯಾಗರಾಜ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಿವಕುಮಾರ ಸ್ವಾಮಿ ಬಡಾವಣೆ 1ನೇ ಮತ್ತು 2ನೇ ಹಂತ ಸರ್ಕಾರಿ ಐ.ಟಿ.ಐ. ಕಾಲೇಜು, ಹದಡಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವುಂಟಾಗಲಿದೆ.

## ಗೌಡ್ರ ರೇವಣಸಿದ್ದಪ್ಪ ನಿಧನ




ದಾವಣಗೆರೆ ದುರ್ಗಾಂಬಿಕ ದೇವಸ್ಥಾನದ ಹತ್ತಿರ, ಶಿವಾಜಿನಗರ ವಾಸಿ ಗೌಡ್ರು ರೇವಣಸಿದ್ದಪ್ಪ (65) ಅವರು ದಿನಾಂಕ 4.10.2021ರಂದು ಸೋಮವಾರ ಬೆಳಗ್ಗೆ 10.30ಕ್ಕೆ ನಿಧನರಾದರು. ಪತ್ನಿ, ನಾಲ್ವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.10.2021ರಂದು ಸೋಮವಾರ ಸಂಜೆ 6 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

# ಟೊಮ್ಯಾಟೋ ಬೆಳೆ : ಇಳುವರಿಗೆ ಪೋಷಕಾಂಶಗಳ ನಿರ್ವಹಣೆ ಮುಖ್ಯ

**ತೋಟಗಾರಿಕೆ ತಜ್ಞ ಎಂ.ಜಿ. ಬಸವನಗೌಡ ಅಭಿಮತ**

ದಾವಣಗೆರೆ, ಅ. 5- ಟೊಮ್ಯಾಟೋ ಬೆಳೆಯಲ್ಲಿ ಉತ್ತಮ ಇಳುವರಿ ಪಡೆಯಲು ಸಮಗ್ರ ಪೋಷಕಾಂಶಗಳ ನಿರ್ವಹಣೆ ಬಹಳ ಮುಖ್ಯ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ತಜ್ಞ ಬಸವನಗೌಡ ಎಂ. ಜಿ. ಅಭಿಪ್ರಾಯಪಟ್ಟರು.

ತಾಲ್ಲೂಕಿನ ಅಗಸನಕಟ್ಟೆ ಗ್ರಾಮದಲ್ಲಿ ವೈಜ್ಞಾನಿಕ ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ವರ್ಷ ಈ ಗ್ರಾಮದಲ್ಲಿಕೇಂದ್ರದವತಿಯಿಂದಟೊಮ್ಯಾಟೋ ಬೆಳೆಯಲ್ಲಿ ಉತ್ತಮ ಇಳುವರಿ, ಪೋಷಕಾಂಶಗಳ ತುಲನೆಯ ಬಗ್ಗೆ ಕ್ಷೇತ್ರ ಪ್ರಯೋಗವನ್ನು ಹಮ್ಮಿಕೊಂಡಿದ್ದು, ಪೋಷಕಾಂಶ ನಿರ್ವಹಣೆಗಾಗಿ ತರಕಾರಿ ಸ್ಪೆಷಲ್ 5 ಗ್ರಾಂ




ಪ್ರತೀ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಹಾಗೂ ಸಮುದ್ರ ಕಳೆಯ ದ್ರಾವಣ ಸಾಗರಿಕಾವನ್ನು 2 ಮಿಲೀ ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವ ತಂತ್ರಜ್ಞಾನವನ್ನು ಪರಿಚಯಿಸಿದ್ದೇವೆ. ಪ್ರಸ್ತುತ ಬೆಳೆ ಹಣ್ಣಿನ ಹಂತದಲ್ಲಿದ್ದು ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದೇನೆ ಎಂದು ತಿಳಿಸಿದರು.

ಪ್ರಸ್ತುತ ಕಳೆದ ವಾರದಿಂದ ಹಗಲು ಉಷ್ಣಾಂಶ ಹೆಚ್ಚಾಗುತ್ತಿದ್ದು ಸಂಜೆ ವೇಳೆ ಉತ್ತಮ ಮಳೆಯಾಗುತ್ತಿದೆ. ಈ ಸಂದರ್ಭದಲ್ಲಿ ಟೊಮ್ಯಾಟೋ ಬೆಳೆಗೆ ಕೊನೆ ಅಂಗಮಾರಿ ರೋಗ ಬರುವ ಸಂಭವವಿದ್ದು, ರೈತರು ಮುನ್ನೆಚ್ಚರಿಕೆಯಾಗಿ ಅಜಾಕ್ಸಿಸ್ಟ್ರೋಬಿಲಿನ್ 0.75 ಮಿಲೀ ಅಥವಾ ಮ್ಯಾಂಕೋಜೆಬ್ 2 ಗ್ರಾಂ. ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪರಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞ ಡಾ. ಟಿ.ಜಿ. ಅವಿನಾಶ್, ತೋಟಗಾರಿಕೆ ವಿದ್ಯಾರ್ಥಿಗಳಾದ ಪಲ್ಲವಿ ಮತ್ತು ಚಂದ್ರಾನಾಯಕ್, ರೈತರಾದ ವಾಮದೇವಪ್ಪ, ಬಸವರಾಜ್ ಹಾಜರಿದ್ದರು.


# ಎಐವೈಎಫ್‌ನಿಂದ ಭಗತ್‌ಸಿಂಗ್ ಜನ್ಮದಿನ




ದಾವಣಗೆರೆ, ಅ.5- ಅಖಿಲ ಭಾರತ ಯುವ ಜನ ಫೆಡರೇಷನ್ ಜಿಲ್ಲಾ ಸಮಿತಿಯಿಂದ ಕ್ರಾಂತಿಕಾರಿ ಭಗತ್‌ಸಿಂಗ್ ಅವರ ಜನ್ಮದಿನವನ್ನು ಆಚರಿಸಲಾಯಿತು.

ನಗರದಲ್ಲಿ ರೈಲ್ವೆ ಸ್ಟೇಷನ್ ಮುಂಭಾಗದ ಭಗತ್‌ಸಿಂಗ್ ಪುತ್ಥಳಿಗೆ ಹೂವಿನಹಾರ ಹಾಕಿ ಸಿಹಿ ಹಂಚುವುದರ ಮೂಲಕ ಆಚರಿಸಲಾಯಿತು. ಸಂಘಟನೆಯ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು, ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು, ಜಿಲ್ಲಾ ಕಾರ್ಯದರ್ಶಿ ಎ. ತಿಪ್ಪೇಶ್ ಮಾತನಾಡಿದರು. ಮುಖಂಡರಾದ ನಿಟ್ಟುವಳ್ಳಿ ಜೀವನ್, ಗುರುಮೂರ್ತಿ, ಕೆ. ಬಾನಪ್ಪ, ಕೆರನಹಳ್ಳಿ ರಾಜು ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದಿನಿಂದ ಶ್ರೀ ಸಾಯಿಬಾಬಾ ಪುಣ್ಯಾರಾಧನೆ



ಎಂ.ಸಿ.ಸಿ. 'ಎ' ಬ್ಲಾಕ್‌ನ ಶ್ರೀ ಸಾಯಿ ಟ್ರಸ್ಟ್‌ನಿಂದ ಶ್ರೀ ಸದ್ಗುರು ಸಾಯಿಬಾಬಾ ಅವರ 103ನೇ ಪುಣ್ಯಾರಾಧನೆ ಮಹೋತ್ಸವವು ಇಂದಿನಿಂದ ಇದೇ ದಿನಾಂಕ 15 ರವರೆಗೆ ಜರುಗಲಿದೆ.

ಶ್ರೀ ಜಡೇಸಿದ್ದ ಶಿವಯೋಗೇಶ್ವರ ಶಾಂತಾಶ್ರಮದ ಶ್ರೀ ಶಿವಾನಂದ ಸ್ವಾಮೀಜಿ ಕಾರ್ಯಕ್ರಮಕ್ಕೆ ದೀಪಾರಾಧನೆ ಮೂಲಕ ಇಂದು ವಿಧ್ಯುಕ್ತ ಚಾಲನೆ ನೀಡಲಿದ್ದಾರೆ. ಇದೇ ದಿನಾಂಕ 15 ರವರೆಗೆ ಪುಣ್ಯಾರಾಧನೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ವಿಶೇಷ ಪೂಜೆಗಳು, ಸಾಮೂಹಿಕ ಸತ್ಯನಾರಾಯಣ ಪೂಜೆ, ಪ್ರಸಾದ ವಿನಿಯೋಗ ನಡೆಯಲಿದೆ.

ಈ ದಿನವನ್ನು ಭಿಕ್ಷಾಟನೆ ದಿನವೆಂದು ಪರಿಗಣಿಸಿರುವುದರಿಂದ ಸಾಯಿ ಭಕ್ತರು ಇಂದಿನಿಂದ ಇದೇ ದಿನಾಂಕ 15 ರವರೆಗೆ ಅಕ್ಕಿ, ಬೆಲ್ಲ, ಗೋಧಿ ನುಚ್ಚು, ರವೆ, ಅವಲಕ್ಕಿ, ಸಕ್ಕರೆ, ನಗದು ಇತ್ಯಾದಿಗಳನ್ನು ಸಮರ್ಪಿಸಬಹುದು ಎಂದು ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

## ಕಚ್ಚಾ ತೈಲ 82 ಡಾಲರ್‌ಗೆ ಏರಿಕೆ

(1ನೇ ಪುಟದಿಂದ) ಹೇಳಿವೆ. ಕಳೆದ ವಾರ ಆರು ಬಾರಿ ಪೆಟ್ರೋಲ್ ಬೆಲೆ ಏರಿಕೆಯಾಗಿದೆ. ದೇಶದ ಬಹುತೇಕ ನಗರಗಳಲ್ಲಿ ಪೆಟ್ರೋಲ್ ಮಾರಾಟ ಬೆಲೆ ಲೀಟರ್‌ಗೆ 100 ರೂ. ಹೆಚ್ಚಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏಳು ವರ್ಷಗಳಲ್ಲಿಯೇ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೇಡಿಕೆ ಅತಿ ಹೆಚ್ಚಾಗಿದ್ದರೂ, ಉತ್ಪಾದನೆಯನ್ನು ಸೀಮಿತ ಪ್ರಮಾಣದಲ್ಲಿ ಹೆಚ್ಚಿಸಲು ತೈಲ ಉತ್ಪಾದನಾ ಕಂಪನಿಗಳು ನಿರ್ಧರಿಸಿವೆ. ಭಾರತ ತೈಲಕ್ಕಾಗಿ ಆಮದನ್ನೇ ಅವಲಂಬಿಸಿದೆ.

ತಿಂಗಳ ಹಿಂದೆ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 72 ಡಾಲರ್ ಆಗಿತ್ತು. ತಿಂಗಳಲ್ಲೇ ಹತ್ತು ಡಾಲರ್ ಬೆಲೆ ಏರಿಕೆಯಾಗಿದೆ. ಕಚ್ಚಾ ತೈಲದ ಬೆಲೆ ಹೆಚ್ಚಾಗಿದ್ದರೂ ಸಹ ತೈಲ ಕಂಪನಿಗಳು ಮಾರಾಟ ಬೆಲೆಯನ್ನು ಸ್ವಲ್ಪ ಕಾಲ ಹೆಚ್ಚಿಸಿರಲಿಲ್ಲ. ಸೆಪ್ಟೆಂಬರ್ 28ರ ನಂತರ ಪೆಟ್ರೋಲ್ ಬೆಲೆ ಲೀಟರ್‌ಗೆ 2.45 ರೂ. ಹಾಗೂ ಡೀಸೆಲ್ ಬೆಲೆ 1.50 ರೂ. ಹೆಚ್ಚಿಸಲಾಗಿದೆ.

ನಿರಂತರವಾಗಿ ಬೆಲೆ ಏರಿಕೆಯಾಗುತ್ತಿರುವುದು ಪ್ರತಿಪಕ್ಷಗಳ ತೀವ್ರ ಟೀಕೆಗೆ ಕಾರಣವಾಗಿದೆ. ಜನಸಾಮಾನ್ಯರು ಬೆಲೆ ಏರಿಕೆಯಿಂದ ಹೈರಾಣಾಗಿದ್ದಾರೆ. ಸರ್ಕಾರ ಇದುವರೆಗೂ ಬೆಲೆ ಇಳಿಕೆಯ ಬೇಡಿಕೆಗೆ ಮಣಿಯುತ್ತಿಲ್ಲ.

ತೈಲ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಕಳೆದ ಶನಿವಾರದಂದು ಬೆಲೆ ಏರಿಕೆಯ ಬಗ್ಗೆ ಹೇಳಿಕೆ ನೀಡಲೂ ಸಹ ನಿರಾಕರಿಸಿದ್ದರು.

# ಬಾಕಿ ವೇತನಕ್ಕಾಗಿ ಆಸ್ಪತ್ರೆಗಳ 'ಡಿ' ಗ್ರೂಪ್ ನೌಕರರ ಪ್ರತಿಭಟನೆ

ದಾವಣಗೆರೆ, ಅ.5- ಬಾಕಿ ವೇತನವನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ, ಕರ್ನಾಟಕ ರಾಜ್ಯ ಸರ್ಕಾರಿ ಖಾಯಂಯೇತರರ ನೌಕರರ ಒಕ್ಕೂಟದ ನೇತೃತ್ವದಲ್ಲಿ ನಗರದಲ್ಲಿಂದು ಆಸ್ಪತ್ರೆಗಳ 'ಡಿ' ಗ್ರೂಪ್ ನೌಕರರು ಪ್ರತಿಭಟನೆ ನಡೆಸಿದರು.




ಜಿಲ್ಲಾ ಪಂಚಾಯಿತಿ ಕಚೇರಿ ಆವರಣದಲ್ಲಿ ಪ್ರತಿಭಟನಾ ಧರಣಿ ನಡೆಸಿದ ಪ್ರತಿಭಟನಾಕಾರರು, ಕೊರೊನಾ ಸಂದರ್ಭದಲ್ಲಿ ಸೋಂಕಿತರ ಸ್ವಚ್ಛತೆ ಸೇರಿದಂತೆ ಇತರೆ ಕಾರ್ಯಗಳನ್ನು ಮಾಡಿರುವ ತಮಗೆ ಬಾಕಿ ವೇತನ ಪಾವತಿಸುವಂತೆ ಜಿಲ್ಲಾ ಪಂಚಾಯತ್ ಸಿಇಒ ಅವರಿಗೆ ಮನವಿ ಸಲ್ಲಿಸಿದರು.

ಕೋವಿಡ್ ಮೊದಲ ಮತ್ತು ಎರಡನೇ ಅಲೆಯಲ್ಲಿ ಕೊರೊನಾ ಸಾಂಕ್ರಾಮಿಕ ರೋಗ ತಡೆಯಲು ಅವಿರತ ಶ್ರಮ ವಹಿಸಿದ ನೌಕರರಲ್ಲಿ ಗ್ರೂಪ್ ಡಿ ನೌಕರರ ಶ್ರಮವೂ ಮುಖ್ಯವಾಗಿದೆ. ಸೋಂಕಿತರನ್ನು ಮಾತನಾಡಿಸಲು ಹೆದರುತ್ತಿದ್ದ ಸಂದರ್ಭದಲ್ಲಿ, ರೋಗಿಗಳಿಗೆ ಅತ್ಯಂತ ಸಮೀಪದಲ್ಲಿದ್ದುಕೊಂಡು, ಕೋವಿಡ್ ರೋಗಿಗಳ ಸ್ವಚ್ಛತೆ, ಕೋವಿಡ್‌ನಿಂದ ಮೃತಪಟ್ಟವರ ಹೆಣಗಳನ್ನು ಸಾಗಿಸುವ ಕೆಲಸ ಮಾಡಿದ್ದಾರೆ. ನೌಕರರಿಗೆ ವೇತನ ನೀಡದೇ ಕೆಲಸದ ಒತ್ತಡ ಹಾಕಲಾಗುತ್ತಿದೆ. ವೇತನ ಪಾವತಿಸುವಂತೆ ಗುತ್ತಿಗೆದಾರನಿಗೆ ಆರೋಗ್ಯ ಇಲಾಖೆ ಯಾವುದೇ ಸೂಚನೆ ನೀಡಿಲ್ಲ ಎಂದು ಸಿಐಟಿಯು ಜಿಲ್ಲಾ ಸಂಚಾಲಕ ಕೆ. ಹೆಚ್. ಆನಂದರಾಜ್ ಆರೋಪಿಸಿದರು.

ಇದೇ ಕೆಲಸವನ್ನು ನಂಬಿಕೊಂಡಿರುವ ನೌಕರರಿಗೆ ಸ್ವಚ್ಛ ಭಾರತ್ ಎಂದು ಘೋಷಣೆ ಮಾಡಿರುವ ಸರ್ಕಾರ ಸುಮಾರು 10 ತಿಂಗಳ ವೇತನ ಮತ್ತು ಸರ್ಕಾರದ ಆದೇಶ ಆದಾಗನಿಂದಲೂ ಕೋವಿಡ್ ರಿಸ್ಕ್ ಅಲೋಯೆನ್ಸ್ ಪಾವತಿಸಿಲ್ಲ. ಆದ್ದರಿಂದ ಈ ನೌಕರರ ಕುಟುಂಬಗಳು ಬೀದಿ ಪಾಲಾಗಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಬಗ್ಗೆ ಜಿಲ್ಲಾ ಪಂಚಾಯತ್ ಸಿಇಒ ಕೇಳಿದರೆ ಸರ್ಕಾರಕ್ಕೆ 1 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆಗಾಗಿ ಬೇಡಿಕೆ ಸಲ್ಲಿಸಲಾಗಿದ್ದು, ಅನುದಾನ ಬಂದ ತಕ್ಷಣವೇ ಬಾಕಿ ವೇತನ ಪಾವತಿಸುವುದಾಗಿ ಹೇಳಿದ್ದಾರೆ. ಅಧಿಕಾರಿಗಳ ತಪ್ಪಿನಿಂದ ನೌಕರರಿಗೆ ವೇತನವನ್ನು ಪಾವತಿ ಆಗುತ್ತಿಲ್ಲ. ಕಾರಣ ಸರ್ಕಾರದ ಅನುದಾನಕ್ಕೆ ಕಾಯದೇ ಬೇರೆ ಮೂಲಗಳಿಂದ ವೇತನವನ್ನು ತಕ್ಷಣವೇ ಪಾವತಿ ಮಾಡಬೇಕೆಂದು ಆಗ್ರಹಿಸಿದರು.

ನೌಕರರನ್ನು ಕೆಲಸದಿಂದ ತೆಗೆದಲ್ಲಿ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು. ಎಲ್ಲಾ ನೌಕರರಿಗೆ ಇಎಸ್‌ಐ, ಇಪಿಎಫ್ ಸೌಲಭ್ಯ ಕಲ್ಪಿಸಬೇಕು. ವಾರದ ರಜೆ ಮತ್ತು ಪರಿಹಾರ ರಜೆ ಕೊಡಬೇಕು. ಗ್ರೂಪ್ ಡಿ ನೌಕರರ ಕುಂದುಕೊರತೆಗಳ ಸಮಿತಿ ರಚಿಸಬೇಕು ಹಾಗೂ ಮಾಸಿಕ ಸಭೆ ಕರೆಯಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಆಟೋ ಚಾಲಕರ ಸಂಘದ ಶ್ರೀನಿವಾಸಮೂರ್ತಿ, ಕಟ್ಟಡ ಕಾರ್ಮಿಕರ ಸಂಘಟನೆಯ ಹೊನ್ನೂರು ತಿಮ್ಮಣ್ಣ, ಆರೋಗ್ಯ ಇಲಾಖೆ ನೌಕರರಾದ ಕುಮಾರ್, ಸರಸ್ವತಿ, ಮಮತ, ಕವಿತ, ಮಂಜುನಾಥ್, ಶಿವಮ್ಮ, ಮಹಾಂತೇಶ್ ಸೇರಿದಂತೆ, ಇತರರು ಭಾಗವಹಿಸಿದ್ದರು.

## ಬೆಳಗಾರರ ಸಮಸ್ಯೆ ಶೀಘ್ರವೇ ಪರಿಹಾರ

(1ನೇ ಪುಟದಿಂದ) ನೀಡಲಾಗಿತ್ತು. ಈ ವರ್ಷ 42.17 ಕೋಟಿ ರೂ. ಮೊತ್ತದ ಬಾಕಿ ಇತ್ತು. ಸೂಚನೆ ಹಿನ್ನೆಲೆಯಲ್ಲಿ ಕಾರ್ಖಾನೆಗಳು ಮೂರು ದಿನಗಳ ಒಳಗಾಗಿ 26.26 ಕೋಟಿ ರೂ. ಜಮೆ ಮಾಡಲಾಗಿದೆ ಎಂದು ತಿಳಿಸಿದರು.

ಇನ್ನು ಮುಂದೆ ರಾಜ್ಯದಲ್ಲಿ ಏಕ ಕಾಲಕ್ಕೆ ಕಬ್ಬಿನ ಕಾರ್ಖಾನೆ ಪ್ರಾರಂಭ ಮಾಡಬೇಕು. ಈ ಬಗ್ಗೆ ಈಗಾಗಲೇ ಎಲ್ಲಾ ಕಬ್ಬು ಕಾರ್ಖಾನೆಗಳ ಮಾಲೀಕರ ಜೊತೆ ಮಾತಾಡಿದ್ದೇನೆ. ಕೆಲವರು ತಮಗೆ ಬೇಕಾದ ಸಮಯದಲ್ಲಿ ಕಾರ್ಖಾನೆ ಪ್ರಾರಂಭ ಮಾಡ್ತಾರೆ. ಇದರಿಂದ ಅನೇಕ ಸಮಸ್ಯೆಗಳು ಆಗುತ್ತಿವೆ. ಹೀಗಾಗಿ ಎಲ್ಲಾ ಕಾರ್ಖಾನೆಗಳಿಗೆ ಏಕ ಕಾಲಕ್ಕೆ ಪ್ರಾರಂಭ ಮಾಡಲು ಸೂಚನೆ ನೀಡಲಾಗಿದೆ. ಆದಷ್ಟು ಬೇಗ ಮತ್ತೊಂದು ಸಭೆ ಮಾಡಿ ಈ ಬಗ್ಗೆ ನಿರ್ಧಾರ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಬೆಳಗಾವಿ- 0.69 ಕೋಟಿ ರೂ., ಜಮಖಂಡಿ ಶುಗರ್ಸ್ ಬಾಗಲಕೋಟೆ - 1.05 ಕೋಟಿ ರೂ., ನಿರಾಣಿ ಶುಗರ್ಸ್ - 5.67 ಕೋಟಿ ರೂ., ಸಾಯಿಪ್ರಿಯ ಶುಗರ್ಸ್ - 4.15 ಕೋಟಿ ರೂ., ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ- 2.09 ಕೋಟಿ ರೂ.ನಷ್ಟು ಪಾವತಿ ಬಾಕಿ ಇತ್ತು. ಒಟ್ಟು 7 ಕಾರ್ಖಾನೆಗಳಿಂದ ರೂ. 42.17 ಕೋಟಿ ಕಬ್ಬು ಬೆಳೆಗಾರರಿಗೆ ಪಾವತಿಯಾಗದೆ ಬಾಕಿ ಉಳಿಸಿಕೊಳ್ಳಲಾಗಿತ್ತು. ಈ ಹಿನ್ನೆಲೆಯಲ್ಲಿ ರೈತರು ಪ್ರತಿಭಟನೆ ನಡೆಸಿದ್ದರು.

## ಜಗಳೂರು ; ವನ್ಯಜೀವಿ ಸಪ್ತಾಹ ಆಚರಣೆ : ರಕ್ಕಸಘಟ್ಟಕ್ಕೆ ಚಾರಣ



ಜಗಳೂರು, ಸೆ.5- ಅರಣ್ಯ ಇಲಾಖೆ ಹಾಗೂ ಲಯನ್ಸ್ ಕ್ಲಬ್, ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ 67ನೇ ವನ್ಯಜೀವಿ ಸಪ್ತಾಹ ಆಚರಣೆ ಅಂಗವಾಗಿ ಕೊಂಡಕುರಿ ಅಭಯಾರಣ್ಯದ ರಕ್ಕಸಘಟ್ಟ, ಕೊಡಗೊಂಡು ಪ್ರದೇಶಗಳಿಗೆ ಚಾರಣ ಆಯೋಜಿಸಲಾಗಿತ್ತು.

ಏಷ್ಯಾದಲ್ಲಿಯೇ ಪ್ರಸಿದ್ದಿಯಾಗಿರುವ ಕೊಂಡಕುರಿ ಅರಣ್ಯ ಪ್ರದೇಶದ ಪ್ರಕೃತಿ ಸೌಂದರ್ಯ ಪ್ರವಾಸಿಗರನ್ನು ಕೈಬೀಸಿ ಕರೆಯುವಂತಿದ್ದು, ಟ್ರಕ್ಕಿಂಗ್ ಆಯೋಜಿಸಿದ್ದು, ಚಾರಣಗಳು ದೈಹಿಕ ಆರೋಗ್ಯಕ್ಕೆ ಪೂರಕವಾಗಲಿವೆ ಎಂದು ವನ್ಯಜೀವಿ ಸಂರಕ್ಷಣಾಧಿಕಾರಿ ಶ್ರೀನಿವಾಸ್ ತಿಳಿಸಿದರು.

ಕೊಂಡಕುರಿ ಧಾಮ ಪ್ರವಾಸಿ ತಾಣವಾಗಿ ಅಭಿವೃದ್ಧಿಯಾಗಲಿದೆ. ರೈತರು ಹಂದಿ, ಕರಡಿ ಹಾವಳಿಗಳ ಬಗ್ಗೆ ಆತಂಕದಲ್ಲಿದ್ದಾರೆ. ಆದ್ದರಿಂದ ಕೆಳಗೋಟೆವರೆಗೂ 5 ಕಿ.ಮೀ ಅಂತರದಲ್ಲಿ ಸೋಲಾರ್ ಫೆನ್ಸಿಂಗ್ ಅಳವಡಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಕಾಡಿನಂಚಿನಲ್ಲಿರುವ ಜಮೀನುಗಳಲ್ಲಿ ಕಾಡು ಪ್ರಾಣಿಗಳಿಗೆ ಇಷ್ಟವಾಗಿರುವ ಬೆಳೆಗಳಿಗೆ ಕಡಿವಾಣ ಹಾಕಿ, ಸಾಂಪ್ರದಾಯಿಕ ವ್ಯವಸಾಯ ಪದ್ಧತಿ ಬದಲಾವಣೆ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಕೊಂಡಕುರಿ ಅಭಯಾರಣ್ಯದಲ್ಲಿ ಚಿಪ್ಪುಹಂದಿ, 150 ಕ್ಕೂ ಅಧಿಕ ಕೊಂಡಕುರಿಗಳು, ಚಿಂಕಾರ, ಕತ್ತೆಕಿರುಬ ಸೇರಿದಂತೆ ಹಲವು ಪ್ರಾಣಿ - ಪಕ್ಷಿ ಸಂತತಿಗಳು ವಾಸವಾಗಿವೆ. ರಕ್ಕಸಘಟ್ಟ ಕರಡಿ ಆವಾಸ ಸ್ಥಾನವಾಗಿದೆ. ಸೋಲಾರ್ ಬೋರ್‌ವೆಲ್‌ಗಳು ಲಭ್ಯವಿದ್ದು, ಪ್ರಾಣಿಗಳಿಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಶೀಘ್ರದಲ್ಲಿಯೇ ಪ್ರವಾಸಿ ಮಂದಿರ ಲೋಕಾರ್ಪಣೆಯಾಗಲಿದೆ.ಎಂದು ಮಾಹಿತಿ ನೀಡಿದರು.

ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಅಣಬೂರು ಮಠದ ಕೊಟ್ರೇಶ್, ತಾಲ್ಲೂಕು ಅಧ್ಯಕ್ಷ ಜಿ.ಎಸ್. ಚಿದಾನಂದಪ್ಪ, ಪದಾಧಿಕಾರಿಗಳಾದ ಲೋಕೇಶ್ ಎಂ. ಐಹೊಳೆ, ಹೆಚ್.ಆರ್.ಬಸವರಾಜ್, ರಾಜಪ್ಪ, ಧನ್ಯಕುಮಾರ್, ಮಾದಿಹಳ್ಳಿ ಮಂಜಪ್ಪ, ಜಗದೀಶ್, ಬಾಬು, ಲಯನ್ಸ್ ಕ್ಲಬ್‌ನ ಫರ್ಜಾನ ಬಾನು, ಚಂಪಾವತಿ, ಶಾಹೀನಾ, ವಾಸಿಂ, ರಕೀಬ್, ಹಫೀಜ್, ಅರಣ್ಯ ಇಲಾಖೆಯ ಪ್ರವೀಣ್ ಕುಮಾರ್, ಐಸಿಟಿ ಚಂದ್ರಶೇಖರ್, ಸತೀಶ್ ಸಿಬ್ಬಂದಿಗಳಾದ ಓಬಳೇಶ್, ಬಸಣ್ಣ ಮತ್ತಿತರರಿದ್ದರು.

## ನವೀಕರಣ ಶುಲ್ಕ 8 ಪಟ್ಟು ಹೆಚ್ಚಳ

(1ನೇ ಪುಟದಿಂದ) ಎಫ್.ಸಿ. ನವೀಕರಣ ಶುಲ್ಕವನ್ನು ಈಗಿರುವ 1,500 ರೂ.ಗಳಿಂದ 12,500 ರೂ.ಗಳಿಗೆ ಹೆಚ್ಚಿಸಲಾಗಿದೆ. ಮಧ್ಯಮ ಗಾತ್ರದ ಸರಕು ಹಾಗೂ ಪ್ರಯಾಣಿಕರ ವಾಹನಗಳ ನವೀಕರಣ ಶುಲ್ಕ 10,000 ರೂ. ಆಗಿದೆ. ಆಮದು ಬೈಕ್ ಹಾಗೂ ಕಾರುಗಳ ನೋಂದಣಿ ನವೀಕರಣ ಶುಲ್ಕ ಕ್ರಮವಾಗಿ 10 ಸಾವಿರ ರೂ.ಗಳಿಂದ 40 ಸಾವಿರ ರೂ. ಆಗಿರಲಿದೆ.

ಪ್ರಸ್ತಾಪಿತ ಬದಲಾವಣೆಗಳು ಏಪ್ರಿಲ್ 1, 2022ರಿಂದ ಜಾರಿಗೆ ಬರಲಿವೆ. ಎಫ್.ಸಿ. ಪ್ರಮಾಣ ಪತ್ರದ ಅವಧಿ ಮೀರಿದ ನಂತರ ಪ್ರತಿ ವಿಳಂಬಕ್ಕೆ ದಿನಕ್ಕೆ 50 ರೂ.ಗಳ ಹೆಚ್ಚುವರಿ ಶುಲ್ಕ ಪಾವತಿಸಬೇಕಾಗುತ್ತದೆ. ನೋಂದಣಿ ಪ್ರಮಾಣ ಪತ್ರದ ಅರ್ಜಿ ಸಲ್ಲಿಕೆ ವಿಳಂಬವಾದಾಗ, ಪ್ರತಿ ತಿಂಗಳಿಗೆ 500 ರೂ.ಗಳವರೆಗೆ ಶುಲ್ಕ ಪಾವತಿಸಬೇಕಾಗುತ್ತದೆ.

## ಅವ್ಯವಸ್ಥೆಯ ಆಗರವಾಗಿರುವ ಆದಾಯ ತರುವ ಆಫೀಸ್...

ಓದುಗರ ಪತ್ರ

ಮಾನ್ಯ ಜಿಲ್ಲಾಧಿಕಾರಿಗಳೇ,

ಜಿಲ್ಲೆಯ ಗಡಿಭಾಗದ ಗ್ರಾಮ ರಾಂಪುರಕ್ಕೆ ರಸ್ತೆ ಮತ್ತು ಬಸ್ ಸೌಕರ್ಯ ಒದಗಿಸಿದ ತಮಗೆ ಧನ್ಯವಾದಗಳು. ಇನ್ನು ನಿಮ್ಮ ಕಚೇರಿಯ ಕೂಗಳತೆಯ ದೂರದಲ್ಲಿರುವ, ಸರ್ಕಾರಕ್ಕೆ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಆದಾಯ ತರುವಂತಹ ಕಚೇರಿಯಾಗಿರುವ ಉಪ ನೋಂದಣಾಧಿಕಾರಿಗಳ ಕಚೇರಿಯ ಪರಿಸ್ಥಿತಿ ತುಂಬಾ ಶೋಚನೀಯ ವಾಗಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳು ಗಮನಹರಿಸಲಿ ಎಂಬುದು ಸಾರ್ವಜನಿಕರ ಕೋರಿಕೆಯಾಗಿದೆ.



ಕಚೇರಿಯ ಮುಂಭಾಗ ಗುಂಡಿಗಳಿಂದ ಕೂಡಿದ ರಸ್ತೆಯಿದ್ದು, ಮಳೆ ಬಂತೆಂದರೆ ಇದು ರಸ್ತೆಯೋ, ನಾಟಿ ಮಾಡಲು ಹದ ಮಾಡಿದ ಜಮೀನೋ ಎಂದು ಸಾರ್ವಜನಿಕರಿಗೆ ಅನುಮಾನ ಬಾರದೇ ಇರದು.

ಉಪ ನೋಂದಣಾಧಿಕಾರಿಗಳ ಕಚೇರಿಯ ಒಳಭಾಗ ಪ್ರವೇಶಿಸಿದರೆ, ಕಚೇರಿಯ ಸ್ಥಿತಿ ನೋಡಿದಾಗ ಸರ್ಕಾರ ಇಷ್ಟು ಕಷ್ಟದಲ್ಲಿ ಇದೆಯೇ ಅನಿಸುತ್ತದೆ. ಪ್ರತಿ ದಿನಕ್ಕೆ ಕೋಟ್ಯಾಂತರ ರೂ. ವ್ಯವಹಾರ ನಡೆಯುವ, ಲಕ್ಷಾಂತರ ರೂ. ಸರ್ಕಾರಕ್ಕೆ ಆದಾಯ ತರುವ ಕಚೇರಿ ಇದು. ಅದರ ಅವ್ಯವಸ್ಥೆ ನೋಡಿದಾಗ ಸಾರ್ವಜನಿಕರಾಗಿ ನಮಗೆ ನಾಚಿಕೆಯಾಗುತ್ತದೆ. ಸರ್ಕಾರಕ್ಕೆ ಅದು ಇದೆಯೋ ಇಲ್ಲವೋ ಗೊತ್ತಿಲ್ಲ...

ಖಾಸಗಿಯವರು ನೂತನವಾಗಿ ಕೇವಲ 15x15 ಅಳತೆಯ ಮಳಿಗೆಯಲ್ಲಿ ಶೋರೂಂ ಪ್ರಾರಂಭಿಸಲು ಅನುಮತಿಗೆ ಅರ್ಜಿ ಹಾಕಿದಾಗ ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಗುತ್ತದೆ. ಆದರೆ, ಸರ್ಕಾರದ ಈ ಕಚೇರಿಯಲ್ಲಿ ಪ್ರತಿದಿನ ಸಾವಿರಾರು ಜನ ಸಾರ್ವಜನಿಕರು, ಸರ್ಕಾರಕ್ಕೆ ಆದಾಯ ನೀಡಲು ಬರುತ್ತಿದ್ದರೂ ಅವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸದ ಸರ್ಕಾರಕ್ಕೆ ನಮ್ಮ ಧಿಕ್ಕಾರ.

ವೃದ್ಧರು, ಮಹಿಳೆಯರು ಕೂರಲು ಸ್ಥಳವಿಲ್ಲದೆ ಮಳೆ, ಬಿಸಿಲಿನಲ್ಲಿ ನಿಂತು ಸರ್ಕಾರಕ್ಕೆ ಆದಾಯ ನೀಡುವ ಯಾವುದಾದರೂ ಇಲಾಖೆ ಇದ್ದರೆ ಅದು ನಮ್ಮ ಉಪ ನೋಂದಣಾಧಿಕಾರಿಗಳ ಕಚೇರಿಯೇ ಆಗಿರುತ್ತದೆ ಎಂದರೆ ತಪ್ಪಾಗಲಾರದು.

ಕಚೇರಿಯ ಮುಂಭಾಗ ಗುಂಡಿಗಳಿಂದ ಕೂಡಿದ ರಸ್ತೆ, ಪಕ್ಕದಲ್ಲಿ ಕೊಳಚೆ ನೀರು, ಜಾಲಿ ಮುಳ್ಳಿನಿಂದ ಕೂಡಿದ ತಿಪ್ಪೆಗಳು, ಪಾರ್ಕಿಂಗ್ ಜಾಗ ಇಲ್ಲದೇ ರಸ್ತೆಯಲ್ಲಿ ನಿಂತ ವಾಹನಗಳು, ಕಚೇರಿಯಲ್ಲಿ ಸಾರ್ವಜನಿಕ ಶೌಚಾಲಯ ವಿಲ್ಲದೆ ಸಾರ್ವಜನಿಕರು ಶೌಚಾಲಯ ಹುಡುಕಿಕೊಂಡು ಅಲೆದಾಡುತ್ತಿರುವ ದೃಶ್ಯಗಳು ಇಲ್ಲಿ ಸಾಮಾನ್ಯ.

ಇನ್ನು ಕಚೇರಿಯಲ್ಲಿ ಸಿಬ್ಬಂದಿಯ ವರ್ತನೆ ನೋಡಿದರೆ, ಇಲ್ಲಿ ನಾವು ತೆಗೆದುಕೊಂಡಿರುವ ಅಥವಾ ಮಾರುತ್ತಿರುವ ಆಸ್ತಿಯ ನೋಂದಣಿಗೆ ಬಂದಿದ್ದೇವೆಯೋ ಅಥವಾ ಇವರ ಹತ್ತಿರ ಸಹಾಯ ಕೇಳಲು ಬಂದಿದ್ದೇವೆಯೋ ಎನ್ನುವ ರೀತಿ ಇರುತ್ತದೆ. ಮಧ್ಯವರ್ತಿಗಳು ಹಾಗೂ ಕಚೇರಿಯ ಕೆಲವು ಸಿಬ್ಬಂದಿಗಳು ನಡೆದುಕೊಳ್ಳುವ ರೀತಿ ದೌರ್ಜನ್ಯದಿಂದ ಕೂಡಿರುತ್ತದೆ. ಕಚೇರಿಯನ್ನು ದೊಡ್ಡ ಜಾಗದಲ್ಲಿ ಮಾಡುವುದನ್ನು ಬಿಟ್ಟು, ಜಾಗ ಚಿಕ್ಕದಿದೆ ಎಂದು ಸಾರ್ವಜನಿಕರನ್ನು ಹೊರಗೆ ತಳ್ಳುವ ಸಿಬ್ಬಂದಿಗಳ ವರ್ತನೆ ಅಮಾನವೀಯ.

ಕಚೇರಿ ಚಿಕ್ಕದಿದೆ ಎಂದು ಹೇಳಿದರೆ ಸದಾ ಅವರ ಉತ್ತರ ಹೊಸ ಕಟ್ಟಡ ನಿರ್ಮಾಣ ನಡೆಯುತ್ತಿದ್ದು, ಶೀಘ್ರದಲ್ಲಿಯೇ ಅಲ್ಲಿಗೆ ಕಚೇರಿ ಸ್ಥಳಾಂತರ ವಾಗಲಿದೆ ಎಂದು. ಕಳೆದ ನಾಲ್ಕಾರು ವರ್ಷಗಳಿಂದ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಲೇ ಇದ್ದು, ಕಟ್ಟಡ ನಿರ್ಮಾಣದ ಮೇಸ್ತ್ರಿಯ ಕರ್ನಿ ಕಳೆದಿದೆಯೋ? ಎಲೆಕ್ಟ್ರೀಷಿಯನ್‌ನ ಕಟಿಂಗ್ ಪ್ಲೇಯರ್ ಕಳೆದಿದೆಯೋ? ಪೇಂಟರ್‌ನ ಬ್ರಷ್ ಕಳೆದಿ ದೆಯೋ? ಟೈಲ್ಸ್ ವರ್ಕರ್‌ನ ಮಷೀನ್ ಕಳೆದಿ ದೆಯೋ ? ಎಂಬುದೇ ಇನ್ನು ಅರ್ಥವಾಗುತ್ತಿಲ್ಲ.

ಒಟ್ಟಿನಲ್ಲಿ ದಾವಣಗೆರೆಯ ಉಪ ನೋಂದಣಾಧಿಕಾರಿ ಗಳ ಕಚೇರಿ ಅವ್ಯವಸ್ಥೆಯ ಆಗರ ಹಾಗೂ ಸಾರ್ವಜನಿಕರಿಂದ ಹಣ ವಸೂಲಿ ಕೇಂದ್ರವಾಗಿದ್ದು, ತಾವುಗಳು ಭೇಟಿ ನೀಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಂಬಿರುವ ಜಿಲ್ಲೆಯ ನಾಗರಿಕರು.

- ಕೆ.ಎಲ್. ಹರೀಶ್ ಬಸಾಪುರ

## ಉದ್ಯೋಗ ಹೆಚ್ಚಳ

(1ನೇ ಪುಟದಿಂದ) ಹೆಚ್ಚಿನ ಉದ್ಯೋಗ ಗಳನ್ನು ಕಲ್ಪಿಸಲಾಗುತ್ತಿದೆ. ಸತತ ಎರಡನೇ ತಿಂಗಳು ಸೇವಾ ವಲಯ ವಿಸ್ತರಣೆ ಕಾಣುತ್ತಿದೆ. ಸೂಚ್ಯಂಕ ಶೇ.50ಕ್ಕಿಂತ ಹೆಚ್ಚಾಗಿದ್ದರೆ ಅದು ಬೆಳವಣಿಗೆ ಯಾಗುತ್ತದೆ. ಕೊರೊನಾ ನಂತರದ ಚೇತರಿಕೆಯಿಂದ ಭಾರತೀಯ ಕಂಪನಿಗಳಿಗೆ ಲಾಭ ವಾಗುತ್ತಿದೆ. ಮಾರುಕಟ್ಟೆಯ ವಾತಾವರಣ ಉತ್ತಮವಾಗಿದೆ ಎಂದು ಹಲವಾರು ಆರ್ಥಿಕ ಪರಿಣಿತರು ಹೇಳಿದ್ದಾರೆ.


### ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327



### ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ಶ್ರೀ ಪಟ್ಟಣಶೆಟ್ಟಿ ಸಂಗಪ್ಪ ಬಿನ್ ಪಟ್ಟಣಶೆಟ್ಟಿ ರುದ್ರಪ್ಪನವರು ಸೈಟ್ ನಂ. 55, #1946/85 ಅಳತೆ 40x60 ಚ.ಅಡಿ., ಎಸ್. ಕೆ. ಕೊಟ್ರಬಸಪ್ಪ ಬಡಾವಣೆಯಲ್ಲಿ ಆಸ್ತಿ ಹೊಂದಿದ್ದು, ಸದರಿಯವರು ಈ ಆಸ್ತಿಯ ಮೂಲ ಪತ್ರವಾದ ಕ್ರಯಪತ್ರ, ದಿನಾಂಕ : 18.2.1983, ಸಂಖ್ಯೆ 6193/82-83 ಇರುವ ಪತ್ರವನ್ನು ಕಳೆದುಕೊಂಡಿದ್ದು, ಯಾರಿಗಾದರೂ ಸಿಕ್ಕಿದ್ದರೆ ಅಥವಾ ಸದರಿ ಆಸ್ತಿಯ ಮೇಲೆ ಆಕ್ಷೇಪಣೆ ಇದ್ದರೆ ಈ ಕೆಳಕಂಡ ವಿಳಾಸದಲ್ಲಿ ಸಲ್ಲಿಸತಕ್ಕದ್ದು.

ವಕೀಲರು, ಸುನೀಲ್ ಕಟಗಿ
# 2008/104 19ನೇ ಅಡ್ಡರಸ್ತೆ, ವಿದ್ಯಾನಗರ, ದಾವಣಗೆರೆ.
ಫೋ. : 91641 12352, 99023 91294



### IN THE COURT OF THE 2ND ADDL, DISTRICT AND SESSION AT DAVANGERE.

M.A. No. : 28/2018

Appellant : Sri Ramappa s/o Late Dodda Kariyappa Aged about 65 years, Occ. Agriculturist, R/o. Gudal Village, Davangere Taluk and District and Others Vs/-

Defendants : A.D. Thippanna and others

Paper Publication Under Order 5 rule 20 (1) (A) of CPC

Respondent No. 2 (B) : Prema W/o Kariyappa, Major, Housewife, R.O. Guddadakumaranahalli Village, Channagiri Taluk, Davangere District.

Respondent No 2 (C) : Ravikumar C. S/o. Shyagle Karibasappa Major, Occ. Agriculturist, R/o. Gudal Village, Davangere Taluk and District.

Respondent No. 3(D) : Chandamma, W/o Udayappa Aged About 42 years, Housewife R/o Bennehalli Village, Harapanahalli Taluk, Bellary District.

Respondent No. 4 (A) : Hanumakka w/o Late Channabasappa Major, Housewife.

Respondent No. 4(B) : Hanumanthappa S/o Late Channabasappa Aged about 39 years, Agriculturist.

Respondent No. 4(C) : Rudramma w/o Late Kotrappa Aged about 31 years, House wife.

Respondent No. 4 (D) : Geetha D/o Late Channabasappa aged about 38 years, Housewife. 4(A) to 4 (D) are all R/o. Gudal Village, Davangere Taluk and District.

Whereas, appellants has filed the above case against the respondents seeking for relief of set-aside the civil Misc petition No. 07/2013 of trail court. the above named persons is hereby directed to appear before 2nd addl, District and Session Judge at Davangere. In person on or advocate on 08.11.2021 at 11.00 a.m. to defend yourself filing which the above Miscellaneous petition will be heard and determined an ex-parte. Give under by hand and seal of this court on day of 30.09.2021.

sd/-
Advocate Nagaraj Patel
LLM#154, P.J. Extension, Davangere.

by Orders of Court
sd/- Chief administrative officer
2nd addl, District and Session
Judge at Davangere.



### ಕರ್ನಾಟಕ ಗೃಹ ಮಂಡಳಿ
### Karanataka Housing Board

ನಂ:ಕಗೃಮಂ/ಉಪ್ರವ್ಯ/ಗ್ರಾ.ಸೇ./ಹಂ-8/ಕು.ದಾ./ನಿ. ಮನೆ/ಇ-ಹರಾಜು/268/2021-22

ಜಿಲ್ಲಾ ಯೋಜನಾ ಕಛೇರಿ, ಕರ್ನಾಟಕ ಗೃಹ ಮಂಡಳಿ ದಾವಣಗೆರೆ, ದಿ: 05.10.2021

#### ತಿದ್ದುಪಡಿ ಹರಾಜು ಪ್ರಕಟಣೆ

**ಕುಂದವಾಡ-ದಾವಣಗೆರೆ ಬಡಾವಣೆಯಲ್ಲಿ ಲಭ್ಯವಿರುವ ವಾಸಯೋಗ್ಯ ಮೂಲೆ ನಿವೇಶನ ಮತ್ತು ಬಿಡಿ ಮನೆಗಳ ಇ-ಹರಾಜು ಪ್ರಕಟಣೆ**

ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಿಸಿರುವ ಕುಂದವಾಡ - ದಾವಣಗೆರೆ ಬಡಾವಣೆಯಲ್ಲಿನ ಆಯ್ದ 07 ಮೂಲೆ ನಿವೇಶನಗಳನ್ನು ಹಾಗೂ 07 ಬಿಡಿ ಮನೆಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗುವುದೆಂದು ದಿನಾಂಕ 04.10.2021ರ ಜನತಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ಪ್ರಕಟಣೆಯಲ್ಲಿ ಇ-ಹರಾಜಿಗಿಟ್ಟಿರುವ ಮನೆಗಳ ಸಂಖ್ಯೆಗಳು ತಪ್ಪಾಗಿ ನಮೂದಾಗಿದ್ದು, ಮನೆಗಳ ಸಂಖ್ಯೆಗಳನ್ನು ಈ ಕೆಳಗಿನಂತೆ ಓದಿಕೊಳ್ಳತಕ್ಕದ್ದು ಹಾಗೂ ದಿನಾಂಕ 04.10.2021ರ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕುಂದವಾಡ-ದಾವಣಗೆರೆ ಬಡಾವಣೆಯಲ್ಲಿ ಇ-ಹರಾಜು ಮೂಲಕ ವಿಲೇಪಡಿಸಲು ಲಭ್ಯವಿರುವ ಬಿಡಿ ಮನೆಗಳ ವಿವರ

| ಕ್ರ.ಸಂ. | ಮನೆ ಸಂಖ್ಯೆ | ವರ್ಗ | ನಿವೇಶನದ ಅಳತೆ ಮೀ.ಗಳಲ್ಲಿ | ನಿವೇಶನದ ವಿಸ್ತೀರ್ಣ (ಚ,ಮೀ.ಗಳಲ್ಲಿ) | ಮನೆಯ ಪ್ಲಿಂತ್ ಏರಿಯಾ (ಚ,ಮೀ.ಗಳಲ್ಲಿ) | ಮಂಡಳಿಯ ಬೆಲೆ (ಪ್ರತಿ ಮನೆಗೆ) ರೂ. |
|---|---|---|---|---|---|---|
| 1 | 1182 | LIG | 9.00 x 12.00 | 108.00 | 60.54 | 21,00,000.00 |
| 2 | 1263 | LIG | 9.00 x 12.00 | 108.00 | 60.54 | 21,00,000.00 |
| 3 | 1825 | LIG | 9.00 x 12.00 | 108.00 | 60.54 | 21,00,000.00 |
| 4 | 1975 | LIG | 9.00 x 12.00 | 108.00 | 60.54 | 21,00,000.00 |
| 5 | 1262 | LIG | 9.00 x 12.00 | 108.00 | 60.54 | 21,00,000.00 |
| 6 | 1260 | LIG | 9.00 x 12.00 | 108.00 | 60.54 | 21,00,000.00 |
| 7 | 2854 | LIG | 9.00 x 12.00 | 108.00 | 60.54 | 21,00,000.00 |

ಇ-ಹರಾಜಿ ಸಾಮಾನ್ಯ ಷರತ್ತು ಮತ್ತು ನಿಯಮ, ನಿಬಂಧನೆಗಳು ಹಾಗೂ ಇತರೆ ಮಾಹಿತಿಗಳಿಗೆ https://www.khb.karnataka.gov.in ಗೆ ಭೇಟಿ ನೀಡಿ ಹಾಗೂ www.eproc.karnataka.gov.in ನಲ್ಲಿ ನೋಂದಣಿಯಾಗಿ ಇ-ಹರಾಜಿನಲ್ಲಿ ಭಾಗವಹಿಸಿ, ಇ-ಹರಾಜಿನಲ್ಲಿ ನೋಂದಣಿಗಾಗಿ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ನೋಂದಣಿಯಾಗಿ ಇ-ಹರಾಜಿನಲ್ಲಿ ಭಾಗವಹಿಸಿ, **ಕರ್ನಾಟಕ ಗೃಹ ಮಂಡಳಿಯಿಂದ ಪ್ರತಿ ತಿಂಗಳು ಇ-ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುತ್ತಿದ್ದು, ಹರಾಜು ಪ್ರಕಟಣೆಗಾಗಿ ಮಂಡಳಿಯ ವೆಬ್ ಸೈಟ್‌ಗೆ ಭೇಟಿ ನೀಡುತ್ತಿರಿ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆಗಳು

**08192-270782 ; 94482 14736 ; 96637 12404 ; 91645 80748**

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಕಗೃಮಂ, ಜಿಯೋಕ, ದಾವಣಗೆರೆ.



ಕರ್ನಾಟಕ ಸರ್ಕಾರ ತೋಟಗಾರಿಕೆ ಇಲಾಖೆ

### ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ರಾಜ್ಯವಲಯ) ದಾವಣಗೆರೆ

Telephone:08192-230049 E-mail:adhssdavanagere@gmail.com

ಸಂ.ಹಿಸತೋನಿ/ರಾವ/ದಾ/2021-22/143 ದಿನಾಂಕ: 04.10.2021

2021-22ನೇ ಸಾಲಿನ ತೋಟಗಾರಿಕೆ ಇಲಾಖೆ ದಾವಣಗೆರೆ ಜಿಲ್ಲೆಯ ಈ ಕೆಳಕಂಡ ತೋಟಗಾರಿಕೆ ಕ್ಷೇತ್ರಗಳಲ್ಲಿನ ಎರಡನೇ ಅವಧಿಯ ಸಪೋಟ ಹಾಗೂ ಅಂಗಾಂಶ ಕೃಷಿ ಬಾಳೆ (ಏಲಕ್ಕಿ) ಫಸಲನ್ನು ಇ-ಹರಾಜು/ ಟೆಂಡರ್ ಕಂ-ಬಹಿರಂಗ ಹರಾಜು ಪ್ರಕಟಣೆ ಹೊರಡಿಸಲಾಗಿದೆ.

#### ಇ-ಹರಾಜು ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮಾತ್ರ)

| ಕ್ರ. ಸಂ | ಇ-ಹರಾಜು ನಡೆಯುವ ತೋಟಗಾರಿಕೆ ಕ್ಷೇತ್ರ ಬೆಳೆ | ಇ-ಹರಾಜು ಮುಕ್ತಾಯಗೊಳ್ಳುವ ದಿನಾಂಕ ಮತ್ತು ವೇಳೆ |
|---|---|---|
| 1 | ಕಡರನಾಯಕನಹಳ್ಳಿ ತೋಟಗಾರಿಕೆ ಕ್ಷೇತ್ರ ಹರಿಹರ ತಾಲ್ಲೂಕು (ಅಂಗಾಂಶ ಕೃಷಿ ಬಾಳೆ (ಏಲಕ್ಕಿ) | 06.11.2021 ಸಾಯಂಕಾಲ 5.00 ಗಂಟೆವರೆಗೆ. |

#### ಟೆಂಡರ್ ಕಂ-ಬಹಿರಂಗ ಮರು ಹರಾಜು ಪ್ರಕಟಣೆ

| ಕ್ರ. ಸಂ | ತೋಟಗಾರಿಕೆ ಕ್ಷೇತ್ರದ ಹೆಸರು ಮತ್ತ ಬೆಳೆ | ಬಹಿರಂಗ ಹರಾಜು/ಟೆಂಡರ್ ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ |
|---|---|---|
| 1 | ವ್ಯಾಸಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರ ಜಗಳೂರು (ಸಪೋಟ | ದಿನಾಂಕ: 22.10.2021 ಬೆಳಿಗ್ಗೆ 11.00 ಗಂಟೆಗೆ, ವ್ಯಾಸಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರ, ಜಗಳೂರು. |

Auction Notice No:-
KSHD/2021-22/AUCTION 3231

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ದಾವಣಗೆರೆ ಇವರನ್ನು ದೂರವಾಣಿ ಸಂಖ್ಯೆ: 08192-230049 ಮೂಲಕ ಸಂಪರ್ಕಿಸಬಹುದಾಗಿದೆ.

ವಾಸಾಇ/ಡಿವಿಜಿ/429/ಎಂಸಿಎ/2021-22

ಸಹಿ/-ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ (ರಾಜ್ಯವಲಯ), ದಾವಣಗೆರೆ

# ಅಲ್ಲಲ್ಲಿ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಆಚರಣೆ

ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳ ಜನ್ಮ ದಿನಾಚರಣೆಯನ್ನು ವಿವಿಧೆಡೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು.



**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ :** ಸ್ಕೌಟ್ಸ್ ಹಾಗೂ ಗೈಡ್ಸ್ ಮಕ್ಕಳು ಸರ್ವಧರ್ಮ ಪ್ರಾರ್ಥನೆ, ಸೈಕಲ್ ಜಾಥಾ ಹಾಗೂ ನಗರದ ಪ್ರಮುಖ ಬೀದಿಗಳಲ್ಲಿ ಪಥ ಸಂಚಲನ ನಡೆಸಿದರು. ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್‌ಗಳು ಹಾಗೂ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು :** ಪ್ರಾಂಶುಪಾಲ ಡಿ.ಹೆಚ್. ಪ್ಯಾಟಿ, ಬೋಧಕ ವರ್ಗದ ಅಣ್ಣಯ್ಯ ಎಂ.ಡಿ., ನಾಗರಾಜು ಜಿ., ಕಾಡಜ್ಜಿ ಶಿವಪ್ಪ, ಡಾ. ರಾಕೇಶ್ ಬಿ.ಸಿ., ಬಸವರಾಜ ದಮ್ಮಳ್ಳಿ, ಮನೋಹರ ಎಸ್.ಬಿ., ಮೌನೇಶ್ವರ ಟಿ.ಎನ್. ಐಕ್ಯುಎಸಿ ಸಂಚಾಲಕ ಅಂಜಿನಪ್ಪ ಡಿ. ಹಾಗೂ ಬೋಧಕೇತರ ವರ್ಗದ ಷಣ್ಮುಖ ಮುನಿಸಿದ್ದಳ್ಳವರ್, ಚಂದ್ರಪ್ಪ ಪಿ.ಎನ್., ಫಕ್ಕೀರಪ್ಪ, ಚೇತನ್ ಎಸ್.ಜಿ. ಉಪಸ್ಥಿತರಿದ್ದರು.

**ದಾವಣಗೆರೆ ವಿಶ್ವವಿದ್ಯಾನಿಲಯ :** ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ್, ಹಣಕಾಸು ಅಧಿಕಾರಿ ಪಿಯಾಂಕ ಡಿ., ಕಲಾ ನಿಕಾಯದ ಡೀನ್ ಡಾ. ಕೆ.ಬಿ. ರಂಗಪ್ಪ, ಶಿಕ್ಷಣ ವಿಭಾಗದ ಡೀನ್ ವೆಂಕಟೇಶ್ ಹಾಗೂ ಎಲ್ಲಾ ವಿಭಾಗಗಳ ಅಧ್ಯಕ್ಷರು, ಉಪಾಧ್ಯಕ್ಷರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ :** ಶಾಲಾ ಮುಖ್ಯಸ್ಥರಾದ ಎಸ್.ಆರ್. ಶಿರಗಂಬಿ, ಡಾ. ಪಿ.ಎಂ. ಪ್ರೇಮಾ, ಎಸ್. ಮಂಜುನಾಥ್, ಅಮ್ರಿನ್ ತಾಜ್, ಜಿ. ಎಸ್. ಶಾಂತಕುಮಾರಿ ಉಪಸ್ಥಿತರಿದ್ದರು. ಶಿಕ್ಷಕರಾದ ವಿದ್ಯಾ ಬಿ.ಎಂ., ಚೇತನಾ ಎಲ್.ವಿ. ಕಾರ್ಯಕ್ರಮ ನಿರ್ವಹಿಸಿದರು.

**ಬೀರೇಶ್ವರ ದೇವಸ್ಥಾನ :** ಶ್ರೀ ಬೀರಲಿಂಗೇಶ್ವರ ವಿದ್ಯಾವರ್ಧಕ ಸಂಘದ ಸರ್ವ ಸದಸ್ಯರು ಹಾಗೂ ಕಾರ್ಯದರ್ಶಿ ಜೆ.ಕೆ. ಕೊಟ್ರಬಸಪ್ಪ, ಜಯಣ್ಣ, ಹೆಚ್. ರವಿ ಕನ್ನವರ, ಎಂ. ನೀಲಕಂಠಪ್ಪ, ಉದಯ ಶಿವಶಂಕರ್, ಪ್ರಕಾಶ್ ಹೆಚ್.ಎನ್., ಹನುಮಂತಪ್ಪ, ನರಸಿಂಹ, ಪೂಜಾರ್ ಈಶ್ವರಪ್ಪ, ಗಂಗಪ್ಪ ಚಿನ್ನಿಕಟ್ಟೆ, ಪುಟ್ಟರಾಜ, ಜೈನ್ ರಾಜು ಉಪಸ್ಥಿತರಿದ್ದರು.

**ರಾಘವೇಂದ್ರ ಹೈಟೆಕ್ ಪಿಯು ಕಾಲೇಜು :** 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆಯ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಚಂದನಾ ಎಸ್.ಜಿ., ದಿಲೀಪ್ ಕೆ., ರಂಜಿತಾ ಹೆಚ್. ಅವರಿಗೆ ಪ್ರಶಸ್ತಿ ನೀಡಲಾಯಿತು. ತರಳಬಾಳು ಕೃಷಿ ಕೇಂದ್ರದ ತೋಟಗಾರಿಕೆ ವಿಜ್ಞಾನಿಗಳಾದ ಎಂ.ಜಿ. ಬಸವನಗೌಡ ಮಾತನಾಡಿದರು. ಪ್ರಾಚಾರ್ಯ ಡಾ. ಅನಿಲ್‌ಕುಮಾರ್ ಶ್ಯಾಗಲೆ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಉಪನ್ಯಾಸಕ ಬಸವರಾಜ್ ಹನುಮಲಿ ಮಾತನಾಡಿದರು. ಕನ್ನಡ ಉಪನ್ಯಾಸಕ ಎಂ.ಆರ್. ಹರೀಶ್ ನಿರೂಪಿಸಿದರು.

**ತಾಲ್ಲೂಕು ಫೋಟೋ ಮತ್ತು ವಿಡಿಯೋಗ್ರಾಫರ್ ಸಂಘ ಹಾಗೂ ಜಿಲ್ಲಾ ಅಖಿಲ ಕರ್ನಾಟಕ ರವಿಚಂದ್ರನ್ ಅಭಿಮಾನಿಗಳ ಸಂಘ, ಕನ್ನಡ ಸಮರ ಸೇನೆ :** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಉಪಸ್ಥಿತರಿದ್ದರು. ತಾಲ್ಲೂಕು ಫೋಟೋ ಮತ್ತು ವಿಡಿಯೋಗ್ರಾಫರ್ ಸಂಘದ ಅಧ್ಯಕ್ಷ ಎಂ. ಮನು ಅಧ್ಯಕ್ಷತೆ ವಹಿಸಿದ್ದರು. ಪದಾಧಿಕಾರಿಗಳಾದ ವೀರೇಶ್, ಚನ್ನಬಸವ ಪಂಚಾಕ್ಷರಯ್ಯ, ಗಣೇಶ್, ರಾಯ್ಕರ್, ಕು. ಪ್ರೇರಣ, ಕನ್ನಡ ಸಮರ ಸೇನೆ ಪದಾಧಿಕಾರಿಗಳಾದ ನಾಗರತ್ನ ಆನಂದ್, ನಾಗರತ್ನ ಮಲ್ಲೇಶಪ್ಪ, ಭೂಮಿಕ ಪ್ರಕಾಶ್, ರಾಜೇಶ್ವರಿ ಉಮೇಶ್, ಸುವರ್ಣಮ್ಮ ಶಂಕ್ರಯ್ಯ ಮತ್ತಿತರರು ಉಪಸ್ಥಿತರಿದ್ದರು.

**ಜಿಲ್ಲಾ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಘ :** ಪ್ರಧಾನ ಕಾರ್ಯದರ್ಶಿ ಹೆಚ್. ಮರುಳಸಿದ್ದಪ್ಪ, ಹೆಚ್. ವಿಜಯಕುಮಾರ್ ಮಾತನಾಡಿದರು. ಇಂದೂಧರ ನಿಶಾನಿಮಠ ಅಧ್ಯಕ್ಷೀಯ ಭಾಷಣ ಮಾಡಿದರು.

**ಯೂರೋ ಸ್ಕೂಲ್ :** ಮುಖ್ಯ ಅತಿಥಿಗಳಾಗಿ ನೇತ್ರ ತಜ್ಞ ಡಾ. ಮಾಧವ ಹೊನ್ನತ್ತಿ, ಶಾಲೆಯ ಗೌರವಾಧ್ಯಕ್ಷರಾದ ಶ್ರೀಮತಿ ರೂಪಾ ನಾಗರಾಜ್ ಶೆಟ್ಟಿ, ಕಾರ್ಯದರ್ಶಿಗಳಾದ ನಾಗರಾಜ್, ಶಾಲೆಯ ಟ್ರಸ್ಟಿ ಡಾ. ಕೆ. ನಾಗರಾಜರಾವ್, ಪ್ರಾಂಶುಪಾಲರಾದ ಶ್ರೀಮತಿ ಸುನಂದ ಪಾಟೀಲ್, ಆಡಳಿತಾಧಿಕಾರಿ ಶ್ರೀಮತಿ ಜಯಶ್ರೀ ಗುಜ್ಜರ್, ಜಂಟಿ ಕಾರ್ಯದರ್ಶಿ ಅಶ್ವತ್ಥ್ ಬಾಬು ಮತ್ತಿತರರು ಉಪಸ್ಥಿತರಿದ್ದರು. ಶಿಕ್ಷಕಿ ಹೇಮಲತಾ ಸ್ವಾಗತಿಸಿದರು. ಶಿಕ್ಷಕಿಯರಾದ ಕು. ಸಹನಾ, ಕು. ಫರೀನಾ ನಿರೂಪಿಸಿದರು. ಕು. ಲತಾ ವಂದಿಸಿದರು.

**ಕೊಂಡಜ್ಜಿ**

**ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ :** ಎಸ್‌ಡಿಎಂಸಿ ಅಧ್ಯಕ್ಷ ಹೆಚ್. ಗಂಗಾಧರ್, ಉಪಾಧ್ಯಕ್ಷ ಪರಮೇಶ್ವರಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕ ಬಿ. ಹನುಮಂತಪ್ಪ ಗಾಂಧೀಜಿ ಹಾಗೂ ಶಾಸ್ತ್ರೀಜಿ ಕುರಿತು ಮಾತನಾಡಿದರು.

**ಆವರಗೆರೆ**

**ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಸಂಸ್ಥೆ :** ಶ್ರೀ ಗುರು ಪಂಚಾಕ್ಷರಿ ಗವಾಯಿ ಮೆಮೋರಿಯಲ್ ಕಾಂಪೋಸಿಟ್ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಸುಗ್ಗಲಾದೇವಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶ್ರೀಮತಿ ಸುನಂದ ವೆರ್ಣೇಕರ್ ಉಪಸ್ಥಿತರಿದ್ದರು. ಕು. ಶ್ರೀದೇವಿ ಪ್ರಾರ್ಥಿಸಿದರು. ಸ್ಫೂರ್ತಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಕು. ಮಾನಸ ಸ್ವಾಗತಿಸಿದರು. ಕು. ಮನೋಜ್ ವಂದಿಸಿದರು.

**ರಾಣೇಬೆನ್ನೂರು**

**ಶ್ರೀ ಶಾರದಾ ವಿದ್ಯಾನಿಕೇತನ :** ಕೆ.ಜಿ. ಸೌಮ್ಯಶ್ರೀ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗಾಂಧೀಜಿ ಕುರಿತು ಮಾತನಾಡಿದರು. ಮುಖ್ಯೋಪಾಧ್ಯಾಯರಾದ ವಂದನಾ ಬಾನಾವಳಿಕರ, ಶಿಕ್ಷಕರು ಹಾಗೂ ಸಹಾಯಕಿ ಚೈತ್ರ ಉಪಸ್ಥಿತರಿದ್ದರು.

**ಶ್ರೀಮಾತಾ ಪಬ್ಲಿಕ್ ಸ್ಕೂಲ್ :** ಶಾಲಾ ಉಪಾಧ್ಯಕ್ಷ ಕೆ.ಎಫ್. ಆನ್ವೇರಿ ಗಾಂಧೀಜಿ ಹಾಗೂ ಶಾಸ್ತ್ರೀಜಿ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸದಸ್ಯ ಬಿ.ಕೆ. ಗಣೇಶ್, ಮುಖ್ಯಸ್ಥ ಎಸ್. ಚನ್ನಬಸಪ್ಪ, ಶಿಕ್ಷಕಿಯರಾದ ಶ್ಯಾಮಿಲಿ ಕಡೂರ, ಬಿ.ಕೆ. ಶಿಲ್ಪಾ, ಪುಷ್ಪಾ ಉಜ್ಜೇರ, ಕೆ. ಸುಕನ್ಯಾ, ರೂಪಾ, ಕವಿತಾ ಉಪಸ್ಥಿತರಿದ್ದರು.

**ಶ್ರೀ ಗುರು ಮಾರ್ಕಂಡೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ :** ಬ್ಯಾಂಕಿನ ಅಧ್ಯಕ್ಷ ಹನುಮಂತಪ್ಪ ಟಿ. ಮುಕ್ತೇನಹಳ್ಳಿ ಗಾಂಧೀಜಿ, ಶಾಸ್ತ್ರೀಜಿ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ಪ್ರೇಮನಾಥ ಲದ್ವಾ, ನಿರ್ದೇಶಕರಾದ ನೀಲಪ್ಪ ಕುಮಾರಪ್ಪ, ಪರಶುರಾಮ ಅಗಡಿ, ಜಗದೀಶ್ ಅಗಡಿ, ಚೇತನಾ ರೋಗಣ್ಣನವರ ಉಪಸ್ಥಿತರಿದ್ದರು.

## ಗಾಂಧೀಜಿ ಸಂದೇಶಗಳು ಇಂದಿಗೂ ವಿಶ್ವಕ್ಕೆ ಸ್ಫೂರ್ತಿ



**ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ**

ದಾವಣಗೆರೆ, ಅ.5- ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಆದರ್ಶಮಯ ಬದುಕು ಮತ್ತು ಸಂದೇಶಗಳು ಇಡೀ ವಿಶ್ವಕ್ಕೆ ಇಂದಿಗೂ ಸ್ಫೂರ್ತಿದಾಯಕವಾಗಿವೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್. ಎಸ್. ಮಂಜುನಾಥ್ ಕುರ್ಕಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕಸಾಪ ವತಿಯಿಂದ ಹಮ್ಮಿಕೊಂಡಿದ್ದ ಗಾಂಧೀಜಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರೀಜಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

20 ನೇ ಶತಮಾನದಲ್ಲಿ ತಮ್ಮ ಚಿಂತನೆಗಳು ಮತ್ತು ಸಂದೇಶಗಳ ಮೂಲಕ ಗಾಂಧೀಜಿಯವರಷ್ಟು ವಿಶ್ವದ ಮೇಲೆ ಗಾಢ ಪರಿಣಾಮ ಬೀರಿದ ಇನ್ನೊಬ್ಬ ನಾಯಕರಿಲ್ಲ. ಅವರು ಸಾರ್ವಕಾಲಿಕ ನಾಯಕರು ಎಂದು ಬಣ್ಣಿಸಿದರು.

ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ ಮಾತನಾಡಿದರು. ಕನ್ನಡ ಪರಿಚಾರಕರಾದ ಬಿ. ವಾಮದೇವಪ್ಪ, ಜನತಾವಾಣಿ ವರದಿಗಾರ ಅಣಬೇರು ಕೆ.ಎನ್.ಬಸವರಾಜು, ಬಿ. ದಿಳ್ಳೆಪ್ಪ, ಜಿ.ಆರ್. ಷಣ್ಮುಖಪ್ಪ, ಕೆ. ರಾಘವೇಂದ್ರ ನಾಯರಿ, ಸುದರ್ಶನ್ ಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರೋಟರಿ ಕ್ಲಬ್‌ನಿಂದ ರಕ್ತದಲ್ಲಿ ಸಕ್ಕರೆ ಅಂಶ ಪರೀಕ್ಷೆ




ದಾವಣಗೆರೆ, ಅ.5 - ರೋಟರಿ ಕ್ಲಬ್ ದಾವಣಗೆರೆ ಸೌತ್ ವತಿಯಿಂದ ಶ್ರೀಮತಿ ಕೆ. ಎಮ್. ಗೌರಮ್ಮ ವಿಶ್ವನಾಥ್ ಸ್ಮರಣಾರ್ಥದ ಅಂಗವಾಗಿ ಮಧುಮೇಹ ಮಣಿಸುವ ಅಭಿಯಾನದಡಿಯಲ್ಲಿ ಉಚಿತ ರಕ್ತದಲ್ಲಿ ಸಕ್ಕರೆ ಅಂಶ ಪರೀಕ್ಷೆ ಮತ್ತು ವೈದ್ಯರ ಜೊತೆ ಸಮಾಲೋಚನಾ ಶಿಬಿರ ನಡೆಸಲಾಯಿತು.

ಕೆ.ಎಂ. ಕಲ್ಲಯ್ಯ ಮೆಮೋರಿಯಲ್ ಹೆಲ್ತ್ ಕೇರ್ ಸೆಂಟರ್ ಜಗಳೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಡಾ. ಹಾಲಸ್ವಾಮಿ ಕಂಬಾಳಿಮಠ್, ಡಾ. ದೀಪಶ್ರೀ, ಡಾ. ಅಂಜು ಪ್ರಕಾಶ್, ಡಾ. ಮೋಹನ್ ಸ್ವಾಮಿ, ಡಾ. ಸುಶ್ಮಿತಾ ಮತ್ತಿತರರು ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ರಾಷ್ಟ್ರೀಯ ಪೋಷಣ್ ಅಭಿಯಾನ



ಮಲೇಬೆನ್ನೂರು, ಅ.5- ಇಲ್ಲಿನ ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪೋಷಣ್ ಅಭಿಯಾನದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ವಿವಿಧ ತರಕಾರಿ, ಕಾಳುಗಳನ್ನು ಜೀವಸತ್ವಗಳ ಪ್ರಕಾರ ಒಪ್ಪವಾಗಿ ಜೋಡಿಸಿ, ಎಲ್ಲರ ಗಮನ ಸೆಳೆದರು.

ಹಣ್ಣು, ತರಕಾರಿ, ಕಾಳುಗಳು, ಮೊಟ್ಟೆ ಇತ್ಯಾದಿಗಳ ಕುರಿತು ಶಿಕ್ಷಕರು ಮಕ್ಕಳಿಗೆ ಅರಿವು ಮೂಡಿಸಿದರು. ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ. ಬಿ.ಸಿ. ವಿಜಯ ರಾಘವ, ಕಾರ್ಯದರ್ಶಿ ಹೆಚ್.ಜಿ. ಚಂದ್ರಶೇಖರ್, ಸಿಆರ್‌ಪಿ ಎ.ಕೆ. ರಾಜಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲಾ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಮಾರುತಿ ಶಾಲೆಯ ಮುಖ್ಯಶಿಕ್ಷಕ ಪರಮೇಶ್ವರಪ್ಪ, ಬೀರಲಿಂಗೇಶ್ವರ ಶಾಲೆಯ ಮುಖ್ಯ ಶಿಕ್ಷಕ ಕರಿಬಸಪ್ಪ, ಲಯನ್ಸ್ ಶಾಲೆಯ ಮುಖ್ಯ ಶಿಕ್ಷಕ ಚಂದ್ರಶೇಖರ್ ಮತ್ತಿತರರು ಅಭಿಯಾನದಲ್ಲಿ ಭಾಗವಹಿಸಿದ್ದರು.

## ರಾಣೇಬೆನ್ನೂರು : ಸಾಕು ನಾಯಿಗಳಿಗೆ ರೇಬಿಸ್ ಲಸಿಕೆ



ರಾಣೇಬೆನ್ನೂರು, ಅ.5- ನಗರಸಭೆ, ರೋಟರಿ ಕ್ಲಬ್ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವ ಮತ್ತು ವಿಶ್ವ ರೇಬಿಸ್ ದಿನಾಚರಣೆ ಪ್ರಯುಕ್ತ ರೇಬಿಸ್ ರೋಗ ಕುರಿತು ಅರಿವು ಹಾಗೂ ಸಾಕು ನಾಯಿಗಳಿಗೆ ಉಚಿತ ಲಸಿಕೆ ಹಾಕುವ ಕಾರ್ಯಕ್ರಮ ನಡೆಸಿದರು. ಶಾಸಕ ಅರುಣ ಕುಮಾರ ಪೂಜಾರ, ರೋಟರಿ ಪದಾಧಿಕಾರಿ ಗಳಾದ ಡಾ. ಚಳಗೇರಿ, ವೀರೇಶ್ ಹನಗೋಡಿಮಠ, ಉಮೇಶ ಹೊನ್ನಾಳಿ, ಜಿ.ಜಿ. ಹೊಟ್ಟಿಗೌಡ್ರ ಮತ್ತಿತರರಿದ್ದರು.

## ಹೊನ್ನಾಳಿ : ನವೋದಯ ಶಾಲೆಗೆ ರಶ್ಮಿ ಆಯ್ಕೆ



ಹೊನ್ನಾಳಿ, ಅ.5 - ತಾಲ್ಲೂಕಿನ ಚಿಕ್ಕಬಾಸೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿ ಅಧ್ಯಯನ ಮಾಡಿದ್ದ ವಿದ್ಯಾರ್ಥಿನಿ ಎಂ.ಎಸ್. ರಶ್ಮಿ ಚನ್ನಗಿರಿ ತಾಲ್ಲೂಕು ದೇವರಹಳ್ಳಿಯ ನವೋದಯ ಶಾಲೆಗೆ ಆಯ್ಕೆಯಾಗಿದ್ದಾರೆ. ರಶ್ಮಿ, ಚಿಕ್ಕಬಾಸೂರು ಗ್ರಾಮದ ಕೆ.ಎಚ್. ಮಲ್ಲಿಕಾರ್ಜುನ್ - ಸೌಭಾಗ್ಯ ದಂಪತಿ ಪುತ್ರಿ.

## ಜೈನ್ ಲೇಔಟ್‌ನಲ್ಲಿ ಗಾಂಧಿ ಜಯಂತಿ



ದಾವಣಗೆರೆ, ಅ.5 -ನಗರದ ಜೈನ್ ಲೇಔಟ್‌ನ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಉಮೇಶ್ ಉಪಸ್ಥಿತರಿದ್ದರು. ಲೇಔಟ್‌ನ ಮಹಿಳೆಯರಾದ ಶಶಿಕಲಾ ಬಡದಾಳ್, ಕುಸುಮ, ಜ್ಯೋತಿ, ಸೋನಮ್ಮ, ಪೂರ್ಣಿಮಾ, ಪ್ರೇಮ, ಸುಮ, ಐಶ್ವರ್ಯ, ಅಕ್ಷತ, ಜ್ಯೋತಿ ಕಾಟ್ ವೆ, ಮಂಜುಳಾ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಇಂದು ಅಭಿನಂದನಾ ಸಮಾರಂಭ

ದಾವಣಗೆರೆಯ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಅವರು ಮಹಾತ್ಮ ಗಾಂಧಿ ಮಾಧ್ಯಮ ಸೇವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 4.45 ಕ್ಕೆ ನಡೆಯಲಿದೆ. ಅಧ್ಯಕ್ಷತೆ : ಶಿವನಕೆರೆ ಬಸವಲಿಂಗಪ್ಪ ವಹಿಸುವರು. ಮುಖ್ಯ ಅತಿಥಿಗಳು : ಎಂ. ಬಸವರಾಜ್. ಪ್ರಶಸ್ತಿ ಪುರಸ್ಕೃತರು : ಇ.ಎಂ. ಮಂಜುನಾಥ, ಎ.ಎನ್. ನಿಂಗಪ್ಪ, ಸುರೇಶ್ ಕೋಲ್ಕುಂಟೆ, ಬಿ.ಎಂ. ಶಿವಕುಮಾರ್, ಜಿ.ಎನ್. ರಾಮಪ್ಪ.

### ಮಾನ್ಯ ಹಿರಿಯ ಸಿವಿಲ್ ನ್ಯಾಯಧೀಶರವರ ನ್ಯಾಯಾಲಯ, ದಾವಣಗೆರೆ

ಜಿ ಅಂಡ್ ಡಬ್ಲ್ಯೂ.ಸಿ. ಸಂಖ್ಯೆ 16/2021

ಅರ್ಜಿದಾರರು : (1) ಶ್ರೀಮತಿ ಕೋಹಿಲಾ ವಿ. ಕೋಂ ಲೇಟ್ ಎನ್. ಅಮಿರ್ತರಾಜ, ವಯಸ್ಸು ಸುಮಾರು 35 ವರ್ಷ, (2) ಚಿ॥ ತಾರೇಶ್ ಎ. ಬಿನ್ ಲೇಟ್ ಎನ್, ಅಮಿರ್ತರಾಜ ವಯಸ್ಸು ಸುಮಾರು 14 ವರ್ಷ, (3) ಚಿ॥ ಲಿತೇಶ್ ಎ. ಬಿನ್ ಲೇಟ್ ಎನ್, ಅಮಿರ್ತರಾಜ ವಯಸ್ಸು ಸುಮಾರು 13 ವರ್ಷ, (4) ಕು॥ ರಿಯಾ ರೆಡ್ಡಿ ಎ. ಬಿನ್ ಲೇಟ್ ಎನ್, ಅಮಿರ್ತರಾಜ ವಯಸ್ಸು ಸುಮಾರು 07 ವರ್ಷ, ಅರ್ಜಿದಾರರ ಸಂ.2 ರಿಂದ 4 ರವರು ಮೈನರ್ ಇದ್ದು. ಅವರ ಕಾನೂನುಬದ್ಧ ವಾರಸುದಾರರಾದ ಅವರ ತಾಯಿ ಶ್ರೀಮತಿ ಕೋಹಿಲಾ. ವಿ ಗಂಡ ಲೇಟ್ ಅಮಿರ್ತರಾಜ ಇವರು ಇರುತ್ತಾರೆ. (1ನೇ ಅರ್ಜಿದಾರರು) ಮೇಲ್ಕಂಡವರ ಎಲ್ಲರ ಖಾಯಂ ವಾಸ: # 191, ಪೆರಿಯಾರೆಟ್ಟಿಪಟ್ಟಿ ಗ್ರಾಮ, ವೇದಾಸಂಡೂರ್, ದಿಂಡಿಗಲ್ ಜಿಲ್ಲೆ, ತಮಿಳುನಾಡು ರಾಜ್ಯ-624 802.
ತಾತ್ಕಾಲಿಕ ವಿಳಾಸ: ಮ.ನಂ. 4757/32, 4ನೇ ಮೇನ್, 2ನೇ ಕ್ರಾಸ್, ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, ದಾವಣಗೆರೆ, ವಿರುದ್ಧ ಎದುರುದಾರರು : ಯಾರೂ ಇಲ್ಲ

### ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಅರ್ಜಿಯನ್ನು ದಿವಂಗತ ಎ. ಅಮಿರ್ತರಾಜ ಇವರ ಮರಣಾನಂತರ 1ನೇ ಅರ್ಜಿದಾರರು ಮತ್ತು ಅಲ್ಪವಯಿ 2 ರಿಂದ 4ನೇ ಅರ್ಜಿದಾರರ ಜಂಟಿ ಹಕ್ಕುದಾರಿ ಸ್ವಾಧೀನಾನುಭವದಲ್ಲಿರುವ ಷೆಡ್ಯೂಲ್ ಸ್ವತ್ತಿನ ಬಗ್ಗೆ 1ನೇ ಅರ್ಜಿದಾರರು ತನ್ನ ಅಲ್ಪವಯಿ 2 ರಿಂದ 4ನೇ ಅರ್ಜಿದಾರರ ಮಕ್ಕಳ ಪರವಾಗಿ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅನುಮತಿ ಕೋರಿ ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ಯಾರದೇ ಆಗಲೀ ಯಾವುದೇ ತಂಟೆ-ತಕರಾರು ಇದ್ದಲ್ಲಿ ಖುದ್ದಾಗಿ ಆಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ **ದಿನಾಂಕ: 22.10.2021 ರಂದು ಬೆಳಗ್ಗೆ 11.00 ಗಂಟೆಗೆ** ಸರಿಯಾಗಿ ಈ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ಯಾರದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಹತೆಯ ಆಧಾರದ ಮೇಲೆ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 5-10-2021 ರಂದು ನೀಡಲಾಗಿದೆ.

ಷೆಡ್ಯೂಲ್ : ದಾವಣಗೆರೆ ತಾಲ್ಲೂಕು, ಕುಂದುವಾಡ ಗ್ರಾಮದ ಸ.ನಂ. 196/1 ರಿಂದ 3, 196/5 ರಿಂದ 7 & ಸ.ನಂ.197/ಪಿ ರಲ್ಲಿ ಭೂ ಪರಿವರ್ತನೆಗೊಂಡು, ಅಂತಿಮ ವಸತಿ ವಿನ್ಯಾಸಗೊಂಡಿರುವ ನಕ್ಷೆಯಲ್ಲಿ ವಿಂಗಡಿಸಿರುವ ಸೈಟ್‌ಗಳಲ್ಲಿ ಸೈಟ್ ನಂ.323, ಡೋರ್ ನಂ.3355/323 ವಿಸ್ತೀರ್ಣ 30'x 50' ರ ಖಾಲಿ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸೈಟ್ ನಂ.324 & 325, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸೈಟ್ ನಂ.321

(ಆರ್.ಟಿ. ವಿನಯ್‌ಕುಮಾರ್)
ಅರ್ಜಿದಾರರ ಪರ ವಕೀಲರು.
ಸ್ಥಳ: ದಾವಣಗೆರೆ
ದಿನಾಂಕ: 05.10.2021

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರ್‌ರವರು
ಪ್ರಧಾನ ಹಿರಿಯ ಸಿವಿಲ್ & ಸಿ.ಜೆ.ಎಂ
ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ತಕ್ಷಣ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ Coffee ಮತ್ತು Serve ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. (Age 20 to 30) (ಹೋಟೆಲ್‌ನಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ) ಕೂಡಲೇ ಸಂಪರ್ಕಿಸಿ :
Anjaneya Badavane, Davangere
Ph. : 93804 69079

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಗೃಹ ಸಾಲ / ಕಾರು ಸಾಲ**
ಸೈಟ್ ಖರೀದಿ, ಮನೆ ಕಟ್ಟಲು, ಮನೆ ಖರೀದಿಸಲು ಮತ್ತು ಕಾರು ಖರೀದಿಸಲು
DSA, Canara Bank, Indian Bank & HDFC Bank
9611866449, 8073345822

**ಬೇಕಾಗಿದ್ದಾರೆ**
ದಾವಣಗೆರೆ ಸಮೀಪದ ತೋಟದಲ್ಲಿ ಕೆಲಸ ಮಾಡಲು ಮತ್ತು ಆಕಳು ನೋಡಿಕೊಳ್ಳಲು ಆಳು ಬೇಕಾಗಿದ್ದಾರೆ. ಮನೆ ಬಳಿ ಇದ್ದುಕೊಂಡೇ ಕೆಲಸ ಮಾಡಲು ಹುಡುಗ ಬೇಕಾಗಿದ್ದಾನೆ. ಸಂಪರ್ಕಿಸಿ:
7018588900 9538870257

**ಮನೆ ಲೀಸ್‌ಗೆ ಇದೆ**
ಡಬಲ್ ರೂಂ, ಅಟ್ಯಾಚ್ ಬಾತ್‌ರೂಂ ಇರುವ ಮನೆ ಲೀಸ್‌ಗೆ ಇದೆ. ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, 4ನೇ ಮೇನ್, ಸಪ್ತಗಿರಿ ಸ್ಕೂಲ್ ಹತ್ತಿರ, ದಾವಣಗೆರೆ.
97425 37448
80730 07234

**ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x50 East, 30x40, 30x40 west ಅಕ್ಕ-ಪಕ್ಕ, 40 ಅಡಿ ರೋಡಿಗಿದೆ., 30x50 30x50 West ಅಕ್ಕ-ಪಕ್ಕ, 30x40 East, 60x40 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
Tally ಆಗಿರುವ ಯುವತಿಯರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಆದ್ಯತೆ. ಕಿಸಾನ್ ವರ್ಲ್ಡ್, ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ. ಸಂಪರ್ಕಿಸಿ
63623 71394

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ, ಅನುಭವವುಳ್ಳ ಎ.ಎನ್.ಎಂ ಆದವರು ಈ ಕೆಳಗಿನ ವಿಳಾಸಕ್ಕೆ ತಮ್ಮ ಬಯೋಡೇಟಾದೊಂದಿಗೆ ಬಂದು ವಿಚಾರಿಸಿ.
ವಿಳಾಸ : ಸ್ಟೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಚಿಗಟೇರಿ ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
99024-52312, 98450-35710

**CAR FOR SALE**
XUV500 W8 Exclusive Limited Edition White colour, 1,45,000 km Driven 2015 Model, Single owner Fully Showroom maintenance.
88844 19930, 88844 19937

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆಯಲ್ಲಿ 4 ಬೆಡ್‌ರೂಂ ಪ್ರತ್ಯೇಕ ಸಿಟ್ಟಿಂಗ್ ಹಾಲ್, ಡೈನಿಂಗ್ ಹಾಲ್, ಬಾಲ್ಕನಿ ಹಾಗೂ ಕಾರ್ ಪಾರ್ಕಿಂಗ್ ಉಳ್ಳ ಮನೆ ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ ಸಂಪರ್ಕಿಸಿ
99644 66999

**WANTED TEACHERS**
English & Social Subject (Higher Primary and High School) interested candidates contact.
8970321855, 8296502675

**Car showroom / Office Furniture, Racks and Aluminium partition for sale**
Mob : 8310530872

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ಸಂಬಳ 8,500 ರಿಂದ 9000 + ESI/PF 8 ತಾಸುಗಳ ಕೆಲಸ
ಸಂಪರ್ಕಿಸಿ: SNA ಪ್ಲಾಜಾ, ಪಿ.ಬಿ. ರಸ್ತೆ, ದಾವಣಗೆರೆ.
91130 53483

**WANTED**
Sales Executive B.Sc/ B.Com Field Work + Store Sales. Fixed Salary plus Incentives. Walk-in with Resume to Agadi Track & Trail, Murughrajendra Complex, Below Karnataka Bank, Hadadi Road

**ಮನೆ ಮತ್ತು ಸೈಟುಗಳು ಮಾರಾಟಕ್ಕಿವೆ**
20×33 ಪೂರ್ವ ದಿಕ್ಕಿನ ಮನೆ, 30×40, 30×50 ಸೈಟುಗಳು ಮಾರಾಟಕ್ಕಿವೆ. ನಿಮ್ಮ ಸೈಟಿನಲ್ಲಿ ಮನೆ ಕಟ್ಟಿ ಕೊಡಲಾಗುವುದು.
ಸಪ್ತಗಿರಿ ಎಂಟರ್ ಪ್ರೈಸಸ್.
ಮುರುಳಿ.
87224 07999

**ಆಯಾ ಬೇಕಾಗಿದ್ದಾರೆ**
ಆಸ್ಪತ್ರೆ ಕೆಲಸಕ್ಕೆ ಆಯಾ ಬೇಕಾಗಿದ್ದಾರೆ. ರಾತ್ರಿ ಡ್ಯೂಟಿ ಇರುವುದಿಲ್ಲ. ಬೆಳಗ್ಗೆ 8 ರಿಂದ ರಾತ್ರಿ 8ರವರೆಗೆ
94488 86026
98865 67791

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಹಾಲ್ ಬಾಡಿಗೆಗೆ**
ನಗರದ ಹೃದಯ ಭಾಗ ಎಂ.ಸಿ.ಸಿ. 'ಎ' ಬ್ಲಾಕ್, 6ನೇ ಮೇನ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ 18x50 ಅಡಿಯ ವಿಶಾಲವಾದ ಸುಸಜ್ಜಿತ 1ನೇ ಮಹಡಿ ಹಾಲ್ ಬ್ಯಾಂಕ್, ಸೊಸೈಟಿ, ಕಛೇರಿ, ಇನ್ನಿತರೆ ವಾಣಿಜ್ಯೋಪಯೋಗಿ ಕೆಲಸಗಳಿಗೆ ಯೋಗ್ಯವಿದ್ದು, ಬಾಡಿಗೆಗಿದೆ. ಸಂಪರ್ಕಿಸಿ :
94481 10287

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಕ್ಕೆ ರೂಂ ಬಾಯ್ ಮತ್ತು ಹಗಲು ಪಾಳೆಯಕ್ಕೆ ಸೂಪರ್ ವೈಸರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸ್ವೀಪರ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. : 63639 54459

**ವಾಹನ ಮಾರಾಟಕ್ಕಿದೆ**
ಉತ್ತಮ ಸ್ಥಿತಿಯಲ್ಲಿರುವ 2012 Model Force Kargo King ವಾಹನ ಮಾರಾಟಕ್ಕಿದೆ. ಕೆ.ಬಿ.ಆರ್ ಇಂಡಸ್ಟ್ರೀಸ್, ಟಿ.ಸಿ ಲೇಔಟ್, ಆರ್.ಎಂ.ಸಿ ಲಿಂಕ್ ರೋಡ್, ದಾವಣಗೆರೆ-577001
Ph. 6362147549

**WANTED**
1) Staff Nurses
2) Lab Technicians
3) Aya
4) OT Technicians
98440 65638

**ತಕ್ಷಣ ಬೇಕಾಗಿದ್ದಾರೆ**
ತಕ್ಷಣ ಯುವಕರು- ಯುವತಿಯರು ಬೇಕಾಗಿದ್ದಾರೆ. Tele Marketing ಯುವತಿಯರಿಗೆ 7,000 ರೂ., Field Work ಯುವಕರಿಗೆ 12,000 ರೂ. ಬೈಕ್ ಇದ್ದವರಿಗೆ ಆದ್ಯತೆ.
ಎಸ್.ಎನ್. ಎಂಟರ್ ಪ್ರೈಸಸ್.
91487 34420, 85489 01454, 78992 96668

**ಮನೆ ಬಾಡಿಗೆಗೆ ಇದೆ**
# 2285/30, E/1, LIG ಕ್ವಾಟ್ರರ್ಸ್ ವಿದ್ಯಾನಗರ ಪಾರ್ಕ್ ಹತ್ತಿರ, ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ 2BHK ಮನೆ ಹಾಗೂ ಸಿಂಗಲ್ ರೂಂ ಬಾಡಿಗೆಗಿದೆ. ವಿದ್ಯಾರ್ಥಿಗಳಿಗೆ/ನೌಕರರಿಗೆ ಮಾತ್ರ.
94480 47581
(ಸಸ್ಯಹಾರಿಗಳಿಗೆ ಮಾತ್ರ)

**JOB OPPORTUNITY**
We need a Tally Faculty (Female)
Any Graduate with 0-2 years can send their CV within 12-10-21 to hardsoftdvg@gmail.com or call us: 97312 18567

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಸ್ಟ್ಯಾಂಡರ್ಡ್ ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇದೆ. ಸಂಬಳ: 20,000/- ಸಂಪರ್ಕಿಸಿ
78291 91921

**ಪ್ರವೇಶ ಪ್ರಕಟಣೆ**
MBBS ಕಡಿಮೆ ಫೀ, PUC- Sci/ Arts/ Comm, SSLC, 7, 8, 9, 10 ಪಾಸ್/ಫೇಲ್ NTC- ನರ್ಸರಿ ಟೀಚರ್ಸ್ ಟ್ರೈನಿಂಗ್
ಗಂಗೋತ್ರಿ ಎಜ್ಯು ಟ್ರಸ್ಟ್ (ರಿ)
ಲಾಯರ್ ರೋಡ್, ದಾವಣಗೆರೆ
86602 35013

**ಲೇಡಿಸ್ ಬೇಕಾಗಿದ್ದಾರೆ**
MAZEL FITNESS HARIHARA ನಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡಲು ಇಬ್ಬರು ಲೇಡೀಸ್ ಬೇಕಾಗಿದ್ದಾರೆ. ಸ್ಥಳ: ವಿಶಾಲ್ ಶೋರೂಂ ಮೇಲೆ ತರಕಾರಿ ಮಾರ್ಕೆಟ್ ಹತ್ತಿರ, ಹರಿಹರ.
Contact: 70191 18739

**ಕೆಲಸಕ್ಕೆ ಬೇಕಾಗಿದ್ದಾರೆ**
ಮ್ಯಾನುಯಲ್ ಬಿಲ್ ಬರೆಯಲು ಮತ್ತು ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
ಹರ್ಷ ಹಾರ್ಡ್ ವೇರ್ & ಪೈಂಟ್ಸ್, ಸುಭಾಷ್ ರಸ್ತೆ, ಅಶೋಕ ಚಿತ್ರ ಮಂದಿರ ಎದುರು, ರೈಲ್ವೆ ಗೇಟ್ ಹತ್ತಿರ ದಾವಣಗೆರೆ-577001

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

**ಡಾ॥ ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 07.10.2021ರ ಗುರುವಾರ ಮತ್ತು 08.10.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**"ಸೂರ್ಯ" ನವೋದಯ ಹಾಸ್ಟೆಲ್**
(ಯಶಸ್ವಿ 26ನೇ ವರ್ಷಕ್ಕೆ ಪಾದಾರ್ಪಣೆ)
ಇದೇ ತಿಂಗಳು ಅಂದರೆ ಅಕ್ಟೋಬರ್ 8 ರಿಂದ ನವೋದಯ ಹಾಸ್ಟೆಲ್ ಆರಂಭವಾಗುತ್ತಿದೆ. ತರಬೇತಿ ನೀಡುವವರು ಶ್ರೀ ಸುರೇಶ್ ಪಿ. ಮುರಗಿ M.Sc., B.Ed, ಹಾಸ್ಟೆಲ್ ವಿಳಾಸ: #844/11 ಹೊಂಗಿರಣ, ಜಯನಗರ 'ಬಿ' ಬ್ಲಾಕ್, ಭಗೀರಥ ಸರ್ಕಲ್ ಹತ್ತಿರ, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
99028 24909, 98447 48763

**ಎಸ್ಸೆಸ್ಸೆಲ್ಸಿ ಅಂಕ ಪಟ್ಟಿ ಕಳೆದಿದೆ**
ಕೆ. ಎಂ. ವಾಗೀಶಯ್ಯ ತಂದೆ ಕೆ. ಎಂ. ಕರಿಬಸಯ್ಯ ವಿಳಾಸ 604/86-4, ಲೆನಿನ್ ನಗರ, ನಿಟ್ಟುವಳ್ಳಿ ವಾಸಿಯಾದ ನಾನು 2019-20ನೇ ಶೈಕ್ಷಣಿಕ ವರ್ಷದಲ್ಲಿ ಶ್ರೀ ಸಿದ್ದಗಂಗಾ ಕಾಂಪೋಜಿಟ್ ಹೈಸ್ಕೂಲ್, ಸಿದ್ದಲಿಂಗೇಶ್ವರ ನಗರ, ದಾವಣಗೆರೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದು, ಜೂನ್/ಜುಲೈ 2020 ರಲ್ಲಿ ಉತ್ತೀರ್ಣನಾಗಿದ್ದು, ನೋಂದಣಿ ಸಂಖ್ಯೆ. 202006407677ರ ಅಂಕಪಟ್ಟಿ ಪ್ರಯಾಣ ಮಾಡುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ನಂಬರ್‌ಗೆ ತಿಳಿಸಲು ಕೋರಿದೆ.
94499 42407, 77602 92021

**REQUIRED**
A Reputed education institute requires Marketing Executive for Davangere Location. Candidates with 1-2 yrs experience can Contact.
8296315876

**ವಧು ಬೇಕಾಗಿದ್ದಾರೆ**
ಹಿಂದೂ ಜನಾಂಗದ ಹುಡುಗ, 2ನೇ ಮದುವೆ, ಪತ್ನಿ ತೀರಿಕೊಂಡಿರುತ್ತಾರೆ. (ಶ್ರೀಮಂತ ಕುಟುಂಬಕ್ಕೆ) ವಧು ಬೇಕಾಗಿದ್ದಾರೆ. ಸ್ಟ್ಯಾಂಡರ್ಡ್ ಕುಟುಂಬದ ವಿಧವೆ, ಗಂಡ ಬಿಟ್ಟಿರುವವರು, ಪತಿ ತೀರಿಕೊಂಡವರು ಮತ್ತು ಮಕ್ಕಳು ಇರುವವರು. ಸಂಪರ್ಕಿಸಿ
90351 50000

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್‌ನಲ್ಲಿ ಕೆಲಸ ಮಾಡಲು Sales Executive ಬೇಕಾಗಿದ್ದಾರೆ. ಬೈಕ್ ಉಳ್ಳವರು ಮಾತ್ರ ಸಂಪರ್ಕಿಸಿ.
74063 96332
74067 40635

**ಮನೆಗಳು ಮಾರಾಟಕ್ಕಿವೆ**
40x60 North ಮೂರು ಬೆಡ್‌ರೂಂ ಮನೆ, ಕುವೆಂಪು ಬಡಾವಣೆಯಲ್ಲಿ, 30x40 West, ಜಯನಗರದಲ್ಲಿ ಹೊಸಮನೆ, 30x40 West, ಶಿವ ಪಾರ್ವತಿ ಲೇಔಟ್‌ನಲ್ಲಿ ಹೊಸ ಮನೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**SALES & MARKETING**
sales & marketing ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ವಯೋಮಿತಿ- 20 ರಿಂದ 30 ವರ್ಷ ಒಳಗೆ
ಸುವೀ ಇಂಡಸ್ಟ್ರೀಸ್ ಕರೂರು ಇಂಡಸ್ಟ್ರಿಯಲ್ ಏರಿಯಾ ದಾವಣಗೆರೆ.
ಮೊ.96206 38679

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859
87620 58369, 90080 67049

# ಉತ್ತರ ಪ್ರದೇಶದಲ್ಲಿ ರೈತರ ಹತ್ಯೆ ಖಂಡಿಸಿ ರೈತ - ಕಾರ್ಮಿಕ ಸಂಘಟನೆಗಳ ಆಕ್ರೋಶ










ದಾವಣಗೆರೆ, ಅ.5- ಉತ್ತರ ಪ್ರದೇಶದ ಲಖೀಂಪುರ ಖೇರಿಯಲ್ಲಿ ರೈತರ ಹತ್ಯೆ ಖಂಡಿಸಿ ನಗರದಲ್ಲಿ ಇಂದು ರೈತ, ಕಾರ್ಮಿಕ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳು ಪ್ರತಿಭಟನೆ ಮುಖೇನ ಆಕ್ರೋಶ ವ್ಯಕ್ತಪಡಿಸಿದವು.

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಒಡ್ಡಿದ ಬೆದರಿಕೆಯ ವಿರುದ್ಧ ರೈತರು ಉತ್ತರ ಪ್ರದೇಶದ ಲಖೀಂಪುರ ಖೇರಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾಗ ಅವರ ಪುತ್ರನು ನೇರ ಗುಂಡಿನ ದಾಳಿ ಮಾಡಿ ರೈತರ ಹತ್ಯೆ ಮಾಡಿದ್ದು ಹಾಗೂ ಗೂಂಡಾಗಳನ್ನು ಹೊಂದಿದ್ದ ಬೆಂಗಾವಲು ವಾಹನಗಳನ್ನು ಚಳವಳಿ ನಿರತರ ಮೇಲೆ ಹಾಯಿಸಿ ರೈತರನ್ನು ಕೊಲೆಗೈದಿರುವುದಾಗಿ ಪ್ರತಿಭಟನಾ ನಿರತ ಸಂಘಟನೆಗಳು ಖಂಡಿಸಿದವು.

**ಅಜಯ್ ಮಿಶ್ರಾ ಪ್ರತಿಕೃತಿ ದಹನ:** ರೈತರ ಮೇಲೆ ಗುಂಡು ಹಾರಿಸಿದ್ದಲ್ಲದೇ, ಕಾರು ಹಾಯಿಸಿ 6 ಜನ ರೈತರನ್ನು ಹತ್ಯೆಗೈದ ಘಟನೆ ಖಂಡಿಸಿ ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾ ಮಂಡಳಿ (ಎಐಕೆಎಸ್) ಯಿಂದ ಜಯದೇವ ವೃತ್ತದಲ್ಲಿ ಕೇಂದ್ರ ಸರ್ಕಾರದ ರಾಜ್ಯ ಗೃಹ ಖಾತೆ ಸಚಿವ ಅಜಯ್ ಮಿಶ್ರಾ ಪ್ರತಿಕೃತಿ ದಹಿಸಿ ಅಸಮಾಧಾನ ವ್ಯಕ್ತಪಡಿಸಲಾಯಿತು.

ಅಪರಾಧಿಗಳನ್ನು ಬಂಧಿಸಿ, ಶಿಕ್ಷೆ ಕೊಡಿಸುವ ಜೊತೆಗೆ ಘಟನೆಯಲ್ಲಿ ಮೃತರಾದ ರೈತರ ಕುಟುಂಬಕ್ಕೆ ತಲಾ 1 ಕೋಟಿ ರೂ. ಪರಿಹಾರ ನೀಡಬೇಕು, ಅಮಾಯಕ ರೈತರನ್ನು ಹತ್ಯೆ ಮಾಡಿದವರನ್ನು ಬಂಧಿಸಬೇಕು. ಸಚಿವ ಅಜಯ್‌ಮಿಶ್ರಾ ಹಾಗೂ ಆತನ ಪುತ್ರನ ಮೇಲೆ

## ಎಐಕೆಎಸ್‌ನಿಂದ ಅಜಯ್ ಮಿಶ್ರಾ ಪ್ರತಿಕೃತಿ ದಹನ

ಗೂಂಡಾ ಕಾಯಿದೆಯಡಿ ಪ್ರಕರಣ ದಾಖಲಿಸಬೇಕು ಎಂದು ಎಐಕೆಎಸ್‌ನ ಜಿಲ್ಲಾಧ್ಯಕ್ಷ ಆವರಗೆರೆ ಹೆಚ್. ಜಿ. ಉಮೇಶ್ ಒತ್ತಾಯಿಸಿದರು.

**ಪ್ರತಿಭಟನಾಕಾರರು-ಪೊಲೀಸರ ಮಧ್ಯೆ ವಾಗ್ವಾದ:** ಪ್ರತಿಭಟನೆ ವೇಳೆ ಅಜಯ್ ಮಿಶ್ರಾ ಪ್ರತಿಕೃತಿ ದಹಿಸಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು-ಪೊಲೀಸರ ಮಧ್ಯೆ ವಾಗ್ವಾದ ನಡೆಯಿತು.

ಅನುಮತಿ ಪಡೆಯದೇ ಪ್ರತಿಭಟನೆ ಮಾಡುವಂತಿಲ್ಲ ಎಂದು ಪೊಲೀಸರು ಹೇಳಿದರೆ, ರೈತರನ್ನು ಕೊಂದ ಕೊಲೆಗಡುಕರನ್ನು ಬಂಧಿಸದ ಸರ್ಕಾರ, ಹೋರಾಟ ಹತ್ತಿಕ್ಕಲು ಮುಂದಾಗುತ್ತಿದೆ ಎಂದು ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಜಿಲ್ಲಾ ಮಂಡಳಿಯ ಆವರಗೆರೆ ವಾಸು, ಎಸ್.ಎಂ.ಸಿದ್ದಲಿಂಗಪ್ಪ, ಯರಗುಂಟೆ ಸುರೇಶ್, ಹೆಚ್.ಕೆ.ಆರ್.ಸುರೇಶ್, ಕಾರ್ಯದರ್ಶಿ ಐರಣಿ ಚಂದ್ರು, ಟಿ.ಎಸ್.ನಾಗರಾಜ್, ಆರ್.ಸುರೇಶ್, ನರೇಗಾ ರಂಗನಾಥ್, ತಿಪ್ಪೇಸ್ವಾಮಿ, ಪರಶುರಾಮ ಸೇರಿದಂತೆ ಇತರರು ಇದ್ದರು.

**ಅಜಯ್ ಮಿಶ್ರಾ ವಿರುದ್ಧ ಕ್ರಿಮಿನಲ್ ಪ್ರಕರಣಕ್ಕೆ ಆಗ್ರಹ:** ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) (ಎಸ್‌ಯುಸಿಐ) (ಸಿ) ಹಾಗೂ ರೈತ-ಕೃಷಿ ಕಾರ್ಮಿಕ ಸಂಘ (ಆರ್‌ಕೆಎಸ್) ಜಿಲ್ಲಾ ಸಮಿತಿ ಜಂಟಿಯಾಗಿ ನಗರದ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿತು.

ಪ್ರತಿಭಟನೆಯಲ್ಲಿ ಎಸ್‌ಯುಸಿಐ ಮುಖಂಡರಾದ ಮಂಜುನಾಥ ಕೈದಾಳೆ, ಮಂಜುನಾಥ ಕುಕ್ಕುವಾಡ, ಮಧು ತೊಗಲೇರಿ, ಡಾ. ಸುನಿತ್‌ಕುಮಾರ್, ತಿಪ್ಪೇಸ್ವಾಮಿ, ಬಿ.ಆರ್. ಅರ್ಪಣಾ ಹಿರೇಮಠ, ನಾಗಜ್ಯೋತಿ, ನಾಗಸ್ಮಿತ, ಕಾವ್ಯ, ಅಭಿಷೇಕ್, ಗುರುಪ್ರಸಾದ್, ಮಂಜುನಾಥ ರೆಡ್ಡಿ, ಜಬೀನಾ ಖಾನಮ್ ಸೇರಿದಂತೆ ಇತರರು ಭಾಗವಹಿಸಿದ್ದರು.

**ಎಐವೈಎಫ್ ಪ್ರತಿಭಟನೆ :** ಅಖಿಲ ಭಾರತ ಯುವಜನ ಫೆಡರೇಷನ್ (ಎಐವೈಎಫ್) ಜಿಲ್ಲಾ ಸಮಿತಿ ಕೂಡಾ ಉಪವಿಭಾಗಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಪ್ರತಿಭಟನೆಯಲ್ಲಿ ಎಐವೈಎಫ್ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು, ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು, ಜಿಲ್ಲಾ ಕಾರ್ಯದರ್ಶಿ ಎ. ತಿಪ್ಪೇಶ್, ನಿಟ್ಟುವಳ್ಳಿ ಜೀವನ್, ಸಿ. ಗುರುಮೂರ್ತಿ, ಕೆ. ಬಾನಪ್ಪ, ಫಜಲುಲ್ಲಾ, ಗದಿಗೇಶ್ ಪಾಳೇದ್, ಇರ್ಫಾನ್, ಹೆಚ್.ಎಂ. ಮಂಜುನಾಥ, ರುದ್ರೇಶ್ ಮಳಲಕೆರೆ, ಪರಶುರಾಮ, ವಿನಯ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಗಾಂಧೀಜಿ ವಿಚಾರಗಳ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವ ಬಿಜೆಪಿ ಸರ್ಕಾರ

## ಹಾಲಿವಾಣದಲ್ಲಿನ ಸ್ವರಾಜ್ ಕಾರ್ಯಕ್ರಮದಲ್ಲಿ ಕಿಡಿ ಕಾರಿದ ಶಾಸಕ ಎಸ್. ರಾಮಪ್ಪ

ಮಲೇಬೆನ್ನೂರು, ಅ .5- ಗ್ರಾಮ ಸ್ವರಾಜ್ಯ ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯೇ ದೇಶ ಹೀಗೇ ಇರಬೇಕು ಎಂದು ಬಯಸಿದ್ದರು. ಆದರೆ ಪ್ರಸ್ತುತ ದೇಶವನ್ನು ಆಡಳಿತ ಮಾಡುತ್ತಿರುವ ಬಿಜೆಪಿ ಸರ್ಕಾರ ಗಾಂಧೀಜಿ ಅವರ ವಿಚಾರಧಾರೆಯ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದೆ ಎಂದು ಶಾಸಕ ಎಸ್.ರಾಮಪ್ಪ ಬೇಸರ ವ್ಯಕ್ತ ಪಡಿಸಿದರು.



ಹಾಲಿವಾಣ ಗ್ರಾಮದಲ್ಲಿ ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಇಂದು ಹಮ್ಮಿಕೊಂಡಿದ್ದ ಗ್ರಾಮ ಸ್ವರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಭೂಮಿ ಗ್ರಾಮಗಳದ್ದು, ಅದರ ಅಧಿಕಾರ ಗ್ರಾಮಗಳಿಗೆ ಇರಬೇಕು. ಗ್ರಾಮಗಳ ಉದ್ಧಾರವಾಗದೆ ದೇಶ ಉದ್ಧಾರವಾಗುವುದಿಲ್ಲ ಎನ್ನುವ ನಂಬಿಕೆ ಗಾಂಧೀಜಿ ಅವರದಾಗಿತ್ತು. ಆದರೆ ನರೇಂದ್ರ ಮೋದಿಯವರ ಬಿಜೆಪಿ ಸರ್ಕಾರ ಅದಾನಿ ಮತ್ತು ಅಂಬಾನಿಗಳನ್ನು ಉದ್ಧಾರ ಮಾಡಲು ಹೊರಟಿದೆ ಎಂದು ಅವರು, ಈ ಬಿಜೆಪಿ ಸರ್ಕಾರ ಸುಗ್ರೀವಾಜ್ಞೆಗಳ ಮೂಲಕ ರೈತರ ಭೂಮಿ ಕಿತ್ತುಕೊಳ್ಳುತ್ತಿದೆ. ಬಂಡವಾಳ ಶಾಹಿಗಳ ಆಣತಿಯಂತೆ ರೈತರ ಪಾಲಿನ ಕರಾಳವಾದ ಕಾಯಿದೆ ತರುವ ಮೂಲಕ ರೈತರಿಗೆ ಮರಣ ಶಾಸನಗಳನ್ನು ರೂಪಿಸಿದ ಅದನ್ನು ವಿರೋಧಿಸಿ ಕಳೆದ ಒಂದು ವರ್ಷದಿಂದ ಪ್ರತಿಭಟನೆ ನಡೆಸಿದರೂ ರೈತರ ಅಹವಾಲು ಕೇಳುವ ಸೌಜನ್ಯವನ್ನು ತೋರುತ್ತಿಲ್ಲ ಎಂದು ರಾಮಪ್ಪ ದೂರಿದರು.

ಉತ್ತರ ಪ್ರದೇಶದಲ್ಲಿ ಪ್ರತಿಭಟನಾ ರೈತರ ಮೇಲೆ ಸಚಿವರ ಮಗ ಕಾರ್ ಹತ್ತಿಸಿ 8 ಜನ ರೈತರ ಸಾವಿಗೆ ಕಾರಣರಾಗಿದ್ದಾರೆ. ಇದನ್ನು ಖಂಡಿಸಿದ ಕಾಂಗ್ರೆಸ್ ನಾಯಕರನ್ನು ಬಂಧಿಸಲಾಗಿದೆ. ಬಂಡವಾಳ ಶಾಹಿಗಳ ಕೈ ಗೊಂಬೆಯಾಗಿರುವ ಈ ಸರ್ಕಾರದ ಕುರಿತು ಜನ ಜಾಗೃತರಾಗಬೇಕಿದೆ ಎಂದು ರಾಮಪ್ಪ ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ವೀಕ್ಷಕರಾದ ದಾವಣಗೆರೆ ದಕ್ಷಿಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಮಾತನಾಡಿ, ದೇಶದಲ್ಲಿ ಕೋಮು ವೈರಸ್‌ನಿಂದಾಗಿ ನಾವಿಂದು ನಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ ಎಂದರು.

ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ವೀಕ್ಷಕರಾದ ದಾವಣಗೆರೆಯ ಎಸ್. ಮಲ್ಲಿಕಾರ್ಜುನ್, ಬಾತಿ ಶಿವಕುಮಾರ್, ಹರಿಹರ ಎಪಿಎಂಸಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಕಾಂಗ್ರೆಸ್ ಮುಖಂಡರಾದ ಎಂ.ನಾಗೇಂದ್ರಪ್ಪ, ಎಸ್.ಜಿ. ಪರಮೇಶ್ವರಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬಿದ್ ಅಲಿ, ನಂದಿಗಾವಿ ಶ್ರೀನಿವಾಸ್, ಗ್ರಾಮದ ಜಿ. ಹನುಮಂತಪ್ಪ, ಕೆ. ರೇವಣಸಿದ್ದಪ್ಪ, ಕುಡಪಲಿ ತಿಪ್ಪೇಶ್, ಎಸ್.ಜಿ. ಮಂಜುನಾಥ್, ಸಂತೋಷ್, ಪ್ರಶಾಂತ್, ಕೊಮಾರನಹಳ್ಳಿಯ ಎಂ.ಆರ್. ಬಸವರಾಜ್, ಎಸ್.ಎಂ. ಮಂಜುನಾಥ್, ಪರಮೇಶ್ ನಾಯ್ಕ್ ಮತ್ತು ಇತರರು ಸಭೆಯಲ್ಲಿ ಭಾಗವಹಿಸಿದ್ದರು.

# ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳು ದಾವಣಗೆರೆಯಲ್ಲಿ ನಡೆಯಲಿ : ದಿನೇಶ್ ಶೆಟ್ಟಿ ಆಶಯ

ದಾವಣಗೆರೆ, ಅ.5 - ದಾವಣಗೆರೆಯಲ್ಲಿ ರಾಜ್ಯಮಟ್ಟದ ಶ್ವಾನ - ಬೆಕ್ಕು ಸ್ಪರ್ಧೆ ಮತ್ತು ಪ್ರದರ್ಶನ ನಡೆಯುತ್ತಿರುವುದು ಸ್ವಾಗತಾರ್ಹವಾಗಿದ್ದು, ಮುಂದಿನ ದಿನಗಳಲ್ಲಿ ರಾಷ್ಟ್ರೀಯ - ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳು ದಾವಣಗೆರೆಯಲ್ಲಿ ನಡೆಯಲಿ ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಆಶಯ ವ್ಯಕ್ತಪಡಿಸಿದರು.



ದಾವಣಗೆರೆ ಪೆಟ್ ಲವರ್ಸ್ ಅಸೋಸಿಯೇಷನ್ ವತಿಯಿಂದ ನಗರದ ಯುಬಿಡಿಟಿ ಮೈದಾನದಲ್ಲಿ ನಿನ್ನೆ ಏರ್ಪಡಿಸಿದ್ದ ರಾಜ್ಯಮಟ್ಟದ ಶ್ವಾನ-ಬೆಕ್ಕು ಸ್ಪರ್ಧೆ ಮತ್ತು ಪ್ರದರ್ಶನದಲ್ಲಿ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಈ ಹಿಂದೆ ಶಾಮನೂರು ಮಲ್ಲಿಕಾರ್ಜುನ್ ಅವರು ಸಚಿವರಾಗಿದ್ದ ವೇಳೆ ಅನೇಕ ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳು ನಡೆದಿದ್ದು, ಮುಂದಿನ ದಿನಗಳಲ್ಲಿ ಎಲ್ಲಾ ರೀತಿಯ ಕ್ರೀಡೆಗಳು ದಾವಣಗೆರೆಯಲ್ಲಿ ನಡೆದರೆ ನಮ್ಮ ಸಹಕಾರ ಇರಲಿದೆ ಎಂದು ತಿಳಿಸಿದರು.

ನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಮಾತನಾಡಿ, ರಾಜ್ಯಮಟ್ಟದ ಈ ಕಾರ್ಯಕ್ರಮದಲ್ಲಿ 35ಕ್ಕೂ ಹೆಚ್ಚು ತಳಿಗಳ 400ಕ್ಕೂ ಹೆಚ್ಚು ಶ್ವಾನ ಮತ್ತು ಬೆಕ್ಕುಗಳು ಭಾಗವಹಿಸಿರುವುದು ಸ್ವಾಗತಾರ್ಹವೆಂದರು.

ಈ ಸಂದರ್ಭದಲ್ಲಿ ವಿನಾಯಕ ಬಸ್‌ನ ಹರೀಶ್, ಗೋಪಾಲಕೃಷ್ಣ, ಸಚಿನ್, ಗುರುರಾಜ್, ಅರವಿಂದ್, ಪವನ್, ಮನೋಜ್ ಮತ್ತಿತರರು ಉಪಸ್ಥಿತರಿದ್ದರು.

ಮುಧೋಳ್ ಶ್ವಾನಕ್ಕೆ ಬೆಸ್ಟ್ ಮುಧೋಳ್ ಎಂಬ ಪ್ರಶಸ್ತಿ ನೀಡುವುದರ ಜೊತೆಗೆ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ ಶ್ವಾನ ಮತ್ತು ಬೆಕ್ಕುಗಳಿಗೆ ಬಹುಮಾನ ವಿತರಿಸಲಾಯಿತು.

## 90 ಎಕರೆ ಭತ್ತದ ಬೆಳೆ ಜಲಾವೃತ

**(1ನೇ ಪುಟದಿಂದ)** ನಾಗರಾಜ್, ಪಿಡಿಓ ಉಮೇಶ್, ಗ್ರಾಮ ಲೆಕ್ಕಾಧಿಕಾರಿ ಸುಭಾನಿ, ಗ್ರಾಮ ಸಹಾಯಕ ರಂಗನಾಥ್ ಸ್ಥಳಕ್ಕೆ ಭೇಟಿ ನೀಡಿ, ಮನೆಯವರಿಗೆ ಸಾಂತ್ವನ ಹೇಳಿ, ಪರಿಹಾರದ ಭರವಸೆ ನೀಡಿದರು.

ಇದೇ ಗ್ರಾಮದಲ್ಲಿ ಇನ್ನೂ 3 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಮಲೇಬೆನ್ನೂರು, ಕುಂಬಳೂರು, ನಂದಿತಾವರೆ, ಹೊಸಹಳ್ಳಿ ಗ್ರಾಮಗಳಲ್ಲೂ ಕೆಲವು ಮನೆಗಳ ಗೋಡೆಗಳು ಕುಸಿದು ಬಿದ್ದಿವೆ.

ಮಳೆಯಿಂದ ಹಾನಿಯಾಗಿರುವ ಬಗ್ಗೆ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸುವಂತೆ ಆಯಾ ಗ್ರಾಮ ಲೆಕ್ಕಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಉಪ ತಹಶೀಲ್ದಾರ್ ಆರ್. ರವಿ 'ಜನತಾವಾಣಿ'ಗೆ ತಿಳಿಸಿದ್ದಾರೆ. ಮಳೆ ಹೆಚ್ಚಾಗುವ ಸಾಧ್ಯತೆ ಇದ್ದು, ತುಂಗಭದ್ರಾ ನದಿ ಪಾತ್ರದ ಜನರನ್ನು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ರವಿ ಮನವಿ ಮಾಡಿದ್ದಾರೆ.

ಕೆಲಸಕ್ಕೆ ಬೇಕಾಗಿದ್ದಾರೆ
ಕ್ಯಾಷಿಯರ್ ಮತ್ತು ಕಪ್ಯೂಟರ್ ಬಿಲ್ಲಿಂಗ್ ಕೆಲಸಕ್ಕಾಗಿ ಬೇಕಾಗಿದ್ದಾರೆ. ಕಂಪ್ಯೂಟರ್ ಅನುಭವ ಹೊಂದಿರುವವರು ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜ ಪೇಟೆ, ದಾವಣಗೆರೆ
9686195323, 9686195334

## ದಾವಲ್‌ಪೇಟೆಯಲ್ಲಿ ಇಂದಿನಿಂದ ಚೌಡೇಶ್ವರಿ ದೇವಸ್ಥಾನದಲ್ಲಿ ದಸರಾ



ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ (ದೈವ ಸಮಿತಿ), ದಾವಲ್‌ಪೇಟೆ, ತೊಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್, ತೊಗಟವೀರ ವಿದ್ಯಾರ್ಥಿ ನಿಲಯ ಸಮಿತಿ, ತೊಗಟವೀರ ಯುವಕ ಸೇವಾ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಚೌಡೇಶ್ವರಿ ದೇವಿಗೆ ಇಂದಿನಿಂದ ಇದೇ ದಿನಾಂಕ 15 ರವರೆಗೆ ನವರಾತ್ರಿ ಕಾರ್ಯಕ್ರಮಗಳು ನಡೆಯಲಿವೆ.

ಕಾರ್ಯಕ್ರಮದ ಅಂಗವಾಗಿ ದಿನಾಂಕ 7 ರ ಗುರುವಾರ ಬೆಳಿಗ್ಗೆ ಅರಿಶಿನ ಕುಂಕುಮ ಅಲಂಕಾರ, ದಿ. 8 ರ ಶುಕ್ರವಾರ ಸಂತಾನ ಲಕ್ಷ್ಮಿ ಅಲಂಕಾರ ನಡೆಯಲಿದೆ. ಅಲಂಕಾರ ಪೂಜೆ ಮಾಡಿಸಲು ವೆಂಕಟೇಶ್ ಎಲ್.ಎಚ್. (96201 74808), ಶ್ರೀಧರ ಮೂರ್ತಿ (97430 98298), ಸುರೇಶ್ ಬಿ. (97271 7771), ರಾಘವೇಂದ್ರ (98442 21931), ತಿಮ್ಮಣ್ಣ (98449 96364) ಅವರುಗಳನ್ನು ಸಂಪರ್ಕಿಸಬಹುದು.

## ನಗರದಲ್ಲಿಂದು ನೆಮ್ಮದಿ ಚಿಕಿತ್ಸಾ ರಂಗ

ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ಮಹಾನಗರ ಪಾಲಿಕೆ ಸಹಯೋಗದೊಂದಿಗೆ ಕೊರೊನಾ ಯೋಧರಿಗೆ 'ನೆಮ್ಮದಿ ಚಿಕಿತ್ಸಾ ರಂಗ 2021-22' ಕಾರ್ಯಕ್ರಮ ಇಂದು ಬೆಳಿಗ್ಗೆ 11 ಗಂಟೆಗೆ ಪಾಲಿಕೆ ಆವರಣದ ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ರಂಗಮಂದಿರದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಎಸ್.ಟಿ. ವೀರೇಶ್ ಉದ್ಘಾಟಿಸಲಿದ್ದು, ಮುಖ್ಯ ಅಥಿತಿಯಾಗಿ ಕಲಾವಿದ ಆರ್.ಟಿ. ಅರುಣ್ ಕುಮಾರ್ ಭಾಗವಹಿಸಲಿದ್ದಾರೆ. ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಪ್ರೊ. ಭೀಮಸೇನ ಆರ್., ಸೇರಿ ಎಲ್ಲಾ ಕೊರೊನಾ ಯೋಧರು (ಪೌರ ಕಾರ್ಮಿಕರು) ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ.

ಇದೇ ವೇಳೆ ಸಿದ್ದರಾಜು ತಂಡದಿಂದ ದ.ರಾ. ಬೇಂದ್ರೆ ಅವರ ಉತ್ತಮ ಹಾಸ್ಯಮಯ ನಾಟಕ ಪ್ರದರ್ಶನ 'ಸಾಯೋ ಆಟ' ನಾಟಕ ಪ್ರದರ್ಶನಗೊಳ್ಳಲಿದೆ.

## ಶಿಕ್ಷಕ ಜಯಪ್ಪ ಅವರಿಗೆ ಸನ್ಮಾನ



ದಾವಣಗೆರೆ, ಅ.5 -ರಾಜ್ಯಮಟ್ಟದ ಗಾಂಧಿ ಜಯಂತಿ ಮತ್ತು 'ಶಿಕ್ಷಣದಲ್ಲಿ ಗಾಂಧಿ' ವಿಚಾರ ಸಂಕಿರಣದಲ್ಲಿ ನಿಟುವಳ್ಳಿಯ ಆರ್.ಎಂ.ಎಸ್.ಎ ಪೌಢ ಶಾಲೆಯ ಗಣಿತ ಶಿಕ್ಷಕ ಕೆ.ಟಿ. ಜಯಪ್ಪ ಅವರಿಗೆ ಮಕ್ಕಳ ಶೈಕ್ಷಣಿಕ ಮತ್ತು ಶಾಲೆಯ ಅಭಿವೃದ್ಧಿಯ ಸೇವೆಯನ್ನು ಪರಿಗಣಿಸಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಬೆಂಗಳೂರಿನಲ್ಲಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶಿಕ್ಷಣ ತಜ್ಞ ಗುರುರಾಜ್ ಕರ್ಜಗಿ ಮತ್ತಿತರರು ಉಪಸ್ಥಿತರಿದ್ದರು.

ಬೇಕಾಗಿದ್ದಾರೆ
1) ಶೋ ರೂಂ ಮ್ಯಾನೇಜರ್–01 ಪುರುಷ / ಮಹಿಳೆ (ಯಾವುದೇ ಪದವಿ)
2) ಸೇಲ್ಸ್ ಎಕ್ಸಿಕ್ಯೂಟಿವ್–02 ಶೋ ರೂಂನಲ್ಲಿ ಹುಡುಗರು/ಹುಡುಗಿಯರು (ಪಿಯುಸಿ ಮೇಲ್ಪಟ್ಟು)
3) ಅಟೆಂಡರ್–01 (ಪುರುಷ), ಸಂಪರ್ಕಿಸಿ :
ಲುಕ್ಸ್ ಆಪ್ಟಿಕಲ್ಸ್
98861 70950, 87623 33702

LOST OF DOCUMENT
My client Pattanshetty Sangappa s/o Pattanshettar Rudrappa is the Owner of site No. 55, door No. 1946/85, Measuring 40x60 fts, situated at S.K. Kotrabasappa Badavane, Davangere but said client had got lost the mother deed i.e. sale deed at 18.02.1983 No. 6193/1982-83. If anybody has found or have any abjection regarding above mention site. please inform to below address.
**Sunil Katagi,** Advocate, # 2008/104, 19th cross, Vidyanagara, Davangere. Ph. : 9164112352

# ಪಾರದರ್ಶಕತೆ ಹೊಂದಿದ ಸಹಕಾರ ಸಂಸ್ಥೆಗಳು ಮಾತ್ರ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯ

ದಾವಣಗೆರೆ, ಅ. 5 - ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಹೊಂದಿದ ಸಹಕಾರ ಸಂಸ್ಥೆಗಳು ಮಾತ್ರ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎನ್.ಎ. ಮುರುಗೇಶ್ ಅಭಿಪ್ರಾಯಪಟ್ಟರು .



**ಜಿಲ್ಲಾ ಸಹಕಾರ ಒಕ್ಕೂಟದ 18 ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷ ಎನ್.ಎ.ಮುರುಗೇಶ್ ಪ್ರತಿಪಾದನೆ**

ನಗರದ ಹರಿಹರ - ದಾವಣಗೆರೆ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನದಲ್ಲಿ ಮೊನ್ನೆ ಏರ್ಪಡಿಸಿದ್ದ ಜಿಲ್ಲಾ ಸಹಕಾರ ಒಕ್ಕೂಟದ 18 ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ 1400 ಸಹಕಾರ ಸಂಸ್ಥೆಗಳಿದ್ದು, ಇವುಗಳಲ್ಲಿ ಸುಮಾರು 1192 ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಹಕಾರ ಚಳುವಳಿ ಸಹಕಾರಿ ಬಂಧುಗಳ ನಿಷ್ಠೆ ಮತ್ತು ಪ್ರಾಮಾಣಿಕ ಸೇವೆಯಿಂದ ಬಲಿಷ್ಠವಾಗಿ, ಸ್ವತಂತ್ರವಾಗಿ ಬೆಳೆಯಲಿ ಹಾಗೂ ಸಹಕಾರಿ ವಲಯ ಎಲ್ಲಾ ವರ್ಗದ ಜನರಿಗೂ ಆಶ್ರಯ ನೀಡಿ ಸಾಮಾಜಿಕವಾಗಿ, ಆರ್ಥಿಕವಾಗಿ ಜನರ ಜೀವನದಲ್ಲಿ ನೆಮ್ಮದಿಯನ್ನುಂಟು ಮಾಡಲು ಸಹಕಾರ ಚಳುವಳಿ ವಿಶೇಷ ಪಾತ್ರ ವಹಿಸಲಿ ಎಂದು ಮುರುಗೇಶ್ ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಸಹಕಾರ ಒಕ್ಕೂಟದ ಹಿರಿಯ ನಿರ್ದೇಶಕರುಗಳಾದ ಬಿ.ವಿ. ಚಂದ್ರಶೇಖರ್ ಮತ್ತು ಜೆ.ಆರ್. ಷಣ್ಮುಖಪ್ಪ ಅವರುಗಳು ಮಾತನಾಡಿ, ನಗರದಲ್ಲಿ ಸಹಕಾರ ಭವನ ನಿರ್ಮಾಣಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ಮನವಿ ಮಾಡಿದರು .

ಶ್ರೀಮತಿ ಸಂಗೀತ ರಾಘವೇಂದ್ರ ಪ್ರಾರ್ಥಿಸಿದರು. ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಸಿರಿಗೆರೆ ರಾಜಣ್ಣ ಸ್ವಾಗತಿಸಿದರು. ಕಾರ್ಯಕ್ರಮವನ್ನು ಒಕ್ಕೂಟದ ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಹೆಚ್. ಸಂತೋಷಕುಮಾರ್ ನಿರೂಪಿಸಿದರು. ಒಕ್ಕೂಟದ ವ್ಯವಸ್ಥಾಪಕ ಕೆ . ಎಂ. ಜಗದೀಶ್ ವಂದಿಸಿದರು.

ಸಮಾರಂಭದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷರಾದ ಹೆಚ್. ಬಸವರಾಜಪ್ಪ, ನಿರ್ದೇಶಕರಾದ ಎಸ್.ಬಿ. ಶಿವಕುಮಾರ್, ಟಿ. ರಾಜಣ್ಣ, ಬಿ. ಶೇಖರಪ್ಪ, ಡಿ.ಎಂ. ಮುರುಗೇಂದ್ರಯ್ಯ, ಶ್ರೀಮತಿ ಅನ್ನಪೂರ್ಣ. ಶ್ರೀಮತಿ ಡಿ. ಶಿವಗಂಗಮ್ಮ ಉಪಸ್ಥಿತರಿದ್ದರು.

## ಕೊಟ್ಟಿಗೆಗೆ ಬೆಂಕಿ : ಎಮ್ಮೆ-ಕೋಳಿಗಳು ಸಜೀವ ದಹನ

ದಾವಣಗೆರೆ, ಅ.5- ಪೆಟ್ರೋಲ್ ಸುರಿದು ಕೊಟ್ಟಿಗೆಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳ ಹೇಯ ಕೃತ್ಯದಿಂದಾಗಿ ಎಮ್ಮೆ ಮತ್ತು ಕೋಳಿಗಳು ಸುಟ್ಟು ಕರಕಲಾಗಿರುವ ಘಟನೆ ತಾಲ್ಲೂಕಿನ ಹುಚ್ಚವ್ವನಹಳ್ಳಿ ವಡ್ಡರಹಟ್ಟಿಯಲ್ಲಿ ಸೋಮವಾರ ಮಧ್ಯರಾತ್ರಿ ನಡೆದಿದೆ.

ರೈತ ಹನುಮಂತಪ್ಪ ಅವರಿಗೆ ಸೇರಿದ ಕೊಟ್ಟಿಗೆಗೆ ಬೆಂಕಿ ಹಚ್ಚಿದ ಪರಿಣಾಮ ದುಬಾರಿ ಬೆಲೆಯ ಮುರ್ರಾತಳಿಯ ಒಂದು ಎಮ್ಮೆ ಮತ್ತು ಇಪ್ಪತ್ತಕ್ಕೂ ಹೆಚ್ಚು ಕೋಳಿಗಳು ಸಜೀವ ದಹನವಾಗಿವೆ.

1.80 ಲಕ್ಷಕ್ಕೂ ಅಧಿಕ ಹಾನಿ ಸಂಭವಿಸಿದೆ. ಮತ್ತೊಂದು ಎಮ್ಮೆ ಸಂಪೂರ್ಣ ಗಾಯಗೊಂಡಿದೆ.

ಈ ಹಿನ್ನೆಲೆಯಲ್ಲಿ ನಷ್ಟ ಅನುಭವಿಸಿರುವ ರೈತ ಹನುಮಂತಪ್ಪ ಅವರಿಗೆ ಸಮಾಜ ಕಲ್ಯಾಣ ಮತ್ತು ಪಶು ಸಂಗೋಪನಾ ಇಲಾಖೆ ನ್ಯಾಯ ಒದಗಿಸಬೇಕು ಮತ್ತು ಬೆಂಕಿ ಹಚ್ಚಿದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸಬೇಕೆಂದು ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ್, ವಿ.ಎನ್. ಪ್ರಕಾಶ್, ಮಳಲಕೆರೆ ಸಿದ್ದೇಶ್, ರಜಾಕ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೇಕಾಗಿದ್ದಾರೆ
ದಾವಣಗೆರೆ ನಗರದ ಪ್ರಸಿದ್ಧ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು
ಮಾರಾಟ ಪ್ರತಿನಿಧಿಗಳು
(Sales Executives)
ತಕ್ಷಣ ಬೇಕಾಗಿದ್ದಾರೆ.
ಆಸಕ್ತರು ಈ ಕೆಳಗಿನ ನಂಬರ್‌ಗೆ ಕರೆ ಮಾಡಿ ಅಥವಾ ತಮ್ಮ ಬಯೋಡೇಟಾವನ್ನು ವಾಟ್ಸಾಪ್ ಅಥವಾ ಕೆಳಗಿನ ಮೇಲ್ ಐಡಿಗೆ ಕಳುಹಿಸಿ.
93803 50327
davanagerejobs@gmail.com

## ಆಯುಷ್ಮಾನ್ ಭಾರತ್ : ಚಿಕಿತ್ಸಾ ದರ ಪರಿಷ್ಕರಣೆ

ನವದೆಹಲಿ ,ಅ. 5 – ಆಯುಷ್ಮಾನ್ ಭಾರತ್ ಯೋಜನೆಯಡಿ ನೀಡಲಾಗುವ 400 ಚಿಕಿತ್ಸೆಗಳ ದರವನ್ನು ಕೇಂದ್ರ ಸರ್ಕಾರ ಪರಿಷ್ಕರಿಸಿದೆ. ಸರ್ಕಾರದ ಕ್ರಮದಿಂದ ಈ ಯೋಜನೆಯಡಿ ಬರುವ ಆಸ್ಪತ್ರೆಗಳು ಉತ್ತಮ ಆರೋಗ್ಯ ಸೇವೆ ಒದಗಿಸಲು ಸಾಧ್ಯವಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. 400 ಪ್ರಕ್ರಿಯೆಗಳ ಚಿಕಿತ್ಸಾ ವೆಚ್ಚವನ್ನು ಶೇ.20ರಿಂದ 400ರವರೆಗೆ ಹೆಚ್ಚಿಸಲಾಗಿದೆ. ಬ್ಲಾಕ್ ಫಂಗಸ್ ರೀತಿಯ ಚಿಕಿತ್ಸೆಗೆ ನೀಡಲಾಗುವ ಹಣವನ್ನು ಹೆಚ್ಚಿಸಲಾಗಿದೆ.

ಈ ಹೆಚ್ಚಳದಿಂದ ಕ್ಯಾನ್ಸರ್ ರೀತಿಯ ರೋಗಗಳ ಚಿಕಿತ್ಸೆಗೆ ನೆರವಾಗಲಿದೆ. ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ.

## ರಾಣೇಬೆನ್ನೂರಿನ ಬ್ರಾಹ್ಮಣ ಸಂಘಕ್ಕೆ ಅಧ್ಯಕ್ಷರ ಆಯ್ಕೆ



ರಾಣೇಬೆನ್ನೂರು, ಅ.5- ಇಲ್ಲಿನ ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ದತ್ತಾತ್ರೇಯ ನಾಡಿಗೇರ ಇಂದು ಅವಿರೋಧವಾಗಿ ಆಯ್ಕೆಯಾದರು.

# ನಗರ ದೇವತೆ ದುಗ್ಗಮ್ಮನ ದೇವಸ್ಥಾನದಲ್ಲಿ ನಾಳೆಯಿಂದ ನವರಾತ್ರಿ



ದಾವಣಗೆರೆ, ಸೆ.5- ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ವತಿಯಿಂದ ನಾಡಿದ್ದು ದಿನಾಂಕ 7 ರಿಂದ ಇದೇ ದಿನಾಂಕ 16ರ ವರೆಗೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ನವರಾತ್ರಿ ಮಹೋತ್ಸವ ಆಚರಿಸಲಾಗುವುದು ಎಂದು ಟ್ರಸ್ಟ್‌ನ ಧರ್ಮದರ್ಶಿ ಗೌಡರ ಚನ್ನಬಸಪ್ಪ ತಿಳಿಸಿದ್ದಾರೆ.

ಶ್ರೀ ದುರ್ಗಾಂಬಿಕಾ ದೇವಸ್ಥಾನದ ಪ್ರಸಾದ ನಿಲಯದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಪ್ರತಿ ದಿನ ರಾತ್ರಿ 8 ಗಂಟೆಯಿಂದ ದೇವಸ್ಥಾನದ ಪಾದಗಟ್ಟಿ ಹತ್ತಿರ ಶ್ರೀ ದೇವಿ ಪುರಾಣ ಪ್ರವಚನ ನಡೆಯಲಿದೆ ಎಂದು ಹೇಳಿದರು.

ನಾಡಿದ್ದು ದಿನಾಂಕ 7ರ ಗುರುವಾರ ಬೆಳಿಗ್ಗೆ 6.30ಕ್ಕೆ ಶ್ರೀ ವಿಘ್ನೇಶ್ವರ ಘಟ ಸ್ಥಾಪನೆ ಹಾಗೂ ಶ್ರೀ ಅಮ್ಮನವರಿಗೆ ಪಂಚಾಮೃತ ಅಭಿಷೇಕವನ್ನು ಟ್ರಸ್ಟ್‌ನ ಗೌರವಾಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಕಾರ್ಯಾಧ್ಯಕ್ಷರೂ ಆಗಿರುವ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಹಾಗೂ ಕುಟುಂಬದವರು ದೀಪ ಬೆಳಗಿಸುವ ಮೂಲಕ 9 ದಿನಗಳ ಸಾಂಪ್ರದಾಯಿಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ದಿನಾಂಕ 7 ರಿಂದ 14ರವರೆಗೆ ಕ್ರಮವಾಗಿ ಅಮ್ಮನವರಿಗೆ ಘಟಸ್ಥಾಪನೆ ಹಂಸವಾಹಿನಿ ಅಲಂಕಾರ, ವೃಷಭ ವಾಹನ ಅಲಂಕಾರ, ಮಯೂರ ವಾಹನ ಅಲಂಕಾರ, ಗರುಡ ವಾಹನ ಅಲಂಕಾರ, ಮೋಹಿನಿ ಅಲಂಕಾರ, ಸರಸ್ವತಿ ಅಲಂಕಾರ, ರಾಜ ರಾಜೇಶ್ವರಿ ಅಲಂಕಾರ, ಗಜಲಕ್ಷ್ಮಿ ಅಲಂಕಾರವಿರುತ್ತದೆ.

14 ರಂದು ಬೆಳಿಗ್ಗೆ ಆಯುಧ ಪೂಜೆ, 10.30ಕ್ಕೆ ಕುಂಭಾಭಿಷೇಕ, 15ರ ಶುಕ್ರವಾರ ವಿಜಯದಶಮಿ ಬನ್ನಿ ಮುಡಿಯುವ ಕಾರ್ಯಕ್ರಮವಿದೆ. 16ರ ಶನಿವಾರ ಲಕ್ಷ್ಮಿ ಅಲಂಕಾರ, ಕಳಸದ ಪೂಜೆ ನಂತರ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ನಡೆಯಲಿವೆ.

ದಿನಾಂಕ 16ರ ಶನಿವಾರ ಅನ್ನ ಸಂತರ್ಪಣೆ ಸೇವೆ ನಡೆಯಲಿದೆ. ದಿ. ಶ್ರೀಮತಿ ಪಾರ್ವತಮ್ಮ ಅವರ ಜ್ಞಾಪಕಾರ್ಥವಾಗಿ ಡಾ.ಶಾಮನೂರು ಶಿವಶಂಕರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ದಾಸೋಹ ಸೇವಾರ್ಥಿಗಳಾಗಿದ್ದಾರೆ. ಅದೇ ದಿನ ಬೆಳಿಗ್ಗೆ 11.30ಕ್ಕೆ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ.

ಸಾಮೂಹಿಕ ವಿವಾಹದಲ್ಲಿ ಶ್ರೀಮತಿ ಸುರೇಖಾ ಗಣೇಶ್ ಡಿ.ಶೇಟ್ ಹಾಗೂ ಶ್ರೀಮತಿ ಸವಿತಾ ಶ್ರೀ ಸುಬ್ರಹ್ಮಣ್ಯ ಡಿ.ಶೇಟ್ ಅವರುಗಳು ಮದುಮಕ್ಕಳಿಗೆ 2 ಚಿನ್ನದ ತಾಳಿ, ಬೆಳ್ಳಿಯ ಕಾಲುಂಗುರಗಳನ್ನು ನೀಡಲಿದ್ದಾರೆ.

ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿದ್ದ ಶ್ರೀಮತಿ ಪದ್ಮಾ ಬಸವಂತಪ್ಪ ಅವರು ಸುಮಾರು 5 ಲಕ್ಷ ರೂ. ಬೆಲೆಯ ಅಂದಾಜು 5 ಅಡಿ ಎತ್ತರದ ಗೋಲ್ಡ್ ಪ್ಲೇಟೆಡ್‌ನ ಹಿತ್ತಾಳೆಯ ಶ್ರೀ ಅಮ್ಮನವರ ಉತ್ಸವ ಮೂರ್ತಿಯನ್ನು ತಯಾರಿಸಿ ಕಮಿಟಿಯವರಿಗೆ ಒಪ್ಪಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್‌ನ ಸದಸ್ಯರಾದ ಹೆಚ್.ಬಿ. ಗೋಣೆಪ್ಪ, ಎಸ್.ಎಂ. ಗುರುರಾಜ ಸೊಪ್ಪಿನವರ್, ಹನುಮಂತರಾವ್ ಸಾವಂತ್ ಉಪಸ್ಥಿತರಿದ್ದರು.

### ರುದ್ರಭೂಮಿಗೆ ಮೂಲ ಸೌಕರ್ಯ ಕಲ್ಪಿಸಲು ಮನವಿ

ಗಾಂಧಿ ನಗರದ ಶ್ರೀ ಚೌಡೇಶ್ವರಿ ದೇವಸ್ಥಾನದ ಎದುರುಗಡೆ ಇರುವ ಹಿಂದೂ ರುದ್ರಭೂಮಿಯಲ್ಲಿ ದೀಪದ ವ್ಯವಸ್ಥೆ, ಸ್ವಚ್ಛತಾ ವ್ಯವಸ್ಥೆ, ನೀರಿನ ವ್ಯವಸ್ಥೆ ಕಲ್ಪಿಸುವಂತೆ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್‌ನ ಧರ್ಮದರ್ಶಿ ಗೌಡರ ಚನ್ನಬಸಪ್ಪ ಮನವಿ ಮಾಡಿದ್ದಾರೆ.

ಶವ ಹೂಳಲು ಕೂಲಿಯವರು ಮೂರ್ನಾಲ್ಕು ಸಾವಿರ ರೂ. ವಸೂಲಿ ಮಾಡುತ್ತಿರುವುದರಿಂದ ಪಾಲಿಕೆಯಿಂದ ಮಿನಿ ಜೆಸಿಬಿ ವ್ಯವಸ್ಥೆ ಮಾಡುವಂತೆಯೂ, ನಗರದಲ್ಲಿ 2 ವಿದ್ಯುತ್ ಚಿತಾಗಾರ ಮಾಡುವಂತೆಯೂ ಅವರು ಜಿಲ್ಲೆಯ ಶಾಸಕರು ಹಾಗೂ ಮಹಾನಗರ ಪಾಲಿಕೆ ಮೇಯರ್ ಅವರಿಗೆ ಮನವಿ ಮಾಡಿದ್ದಾರೆ.

# ಅನ್‌ಲಾಕ್ ನಂತರ ಚೇತರಿಕೆ ನಿರೀಕ್ಷೆಯಲ್ಲಿ ಖಾದಿ ಗ್ರಾಮೋದ್ಯೋಗ

**ಜಿಲ್ಲಾಧಿಕಾರಿ ಕಚೇರಿಯಲ್ಲೊಂದು ಮಾರಾಟ ಮಳಿಗೆ ಸ್ಥಾಪನೆ. ರೈಲ್ವೆಯಿಂದ ಖಾದಿ ಬಟ್ಟೆ ಖರೀದಿ ಪುನರಾರಂಭ**

ದಾವಣಗೆರೆ, ಅ. 5 - ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಾಶ್ವತ ಖಾದಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಖಾದಿ ಗ್ರಾಮೋದ್ಯೋಗ ಮಂಡಳಿಯ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಸಿ. ನವೀನ್‌ಕುಮಾರ್ ತಿಳಿಸಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ ಭವನದಲ್ಲಿ ಖಾದಿ ಮಂಡಳಿ ವತಿಯಿಂದ ಖಾದಿ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಒಂದೇ ದಿನದಲ್ಲಿ 50 ಸಾವಿರ ರೂ.ಗಳಷ್ಟು ವಹಿವಾಟು ನಡೆದಿದೆ ಎಂದವರು ಹೇಳಿದ್ದಾರೆ.

ಜಿಲ್ಲಾಡಳಿತ ಭವನದಲ್ಲಿ ಖಾದಿ ವಸ್ತುಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಶಾಶ್ವತ ಮಳಿಗೆ ರೂಪಿಸಲು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಬಳಿ ಪ್ರಸ್ತಾಪಿಸಿದಾಗ ಸಮ್ಮತಿಸಿದ್ದಾರೆ. ಇನ್ನೆರಡು ತಿಂಗಳ ಒಳಗೆ ಎಲ್ಲ ವ್ಯವಸ್ಥೆ ಮಾಡಿಕೊಂಡು ಮಳಿಗೆ ಆರಂಭಿಸಲಾಗುವುದು ಎಂದವರು ಹೇಳಿದ್ದಾರೆ.

ನಗರದಲ್ಲಿ ಖಾದಿ ಗ್ರಾಮೋದ್ಯೋಗ ಮಂಡಳಿಯ ಎಂಟು ಮಾರಾಟ ಮಳಿಗೆಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲಾಡಳಿತ ಭವನದಲ್ಲಿ ಒಂಭತ್ತನೇ ಮಳಿಗೆ ಸ್ಥಾಪನೆಯಾಗಲಿದೆ ಎಂದವರು ಹೇಳಿದ್ದಾರೆ.

ಲಾಕ್‌ಡೌನ್ ಕಾರಣದಿಂದಾಗಿ ಖಾದಿ ಬಟ್ಟೆಗಳ ಮಾರಾಟದಲ್ಲಿ ತೀವ್ರ ಕುಸಿತವಾಗಿತ್ತು. ಲಾಕ್‌ಡೌನ್ ತೆರವಿನ ನಂತರ ಪರಿಸ್ಥಿತಿ ಸುಧಾರಿಸುತ್ತಿದೆ. ನಿನ್ನೆ ದಾವಣಗೆರೆ ಜಿಲ್ಲೆಯ ಮಳಿಗೆಗಳಲ್ಲಿ ಒಂದೇ ದಿನ 4.50 ಲಕ್ಷ ರೂ.ಗಳಷ್ಟು ವಹಿವಾಟು ನಡೆದಿದೆ. ಹಬ್ಬದ ದಿನಗಳ ಹಿನ್ನೆಲೆಯಲ್ಲಿ ಖರೀದಿ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದವರು ತಿಳಿಸಿದ್ದಾರೆ.

ರೈಲ್ವೆ ಇಲಾಖೆಯ ಬೇಡಿಕೆ ಈಡೇರಿಸಲು ಚರಕ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘದಿಂದ ಬಟ್ಟೆಗಳನ್ನು ಪೂರೈಸಲಾಗುತ್ತದೆ. ಎರಡು ವರ್ಷಗಳಿಂದ ರೈಲ್ವೆ ಕಾರ್ಯ ನಿರ್ವಹಣೆಯಲ್ಲಿ ತೊಂದರೆಯಾದ ಕಾರಣ ಸುಮಾರು 2 ಲಕ್ಷ ಮೀಟರ್ ದಾಸ್ತಾನು ಹಾಗೆ ಉಳಿದಿದೆ. ಈಗ ರೈಲುಗಳು ಮತ್ತೆ ಕಾರ್ಯಾರಂಭ ಮಾಡಿರುವುದರಿಂದ ಬೇಡಿಕೆ ಪುನರಾರಂಭವಾಗಿದೆ ಎಂದು ನವೀನ್ ಕುಮಾರ್ ಹೇಳಿದ್ದಾರೆ.

ರೈಲ್ವೆಗಾಗಿ ತಯಾರಾಗಿರುವ ಬಟ್ಟೆಯನ್ನು ಹಾಸ್ಟೆಲ್ ಬಳಕೆಗೆ ಖರೀದಿಸುವಂತೆ ಜಿಲ್ಲಾ ಪಂಚಾಯ್ತಿ ಬಳಿಯೂ ಮನವಿ ಸಲ್ಲಿಸಲಾಗಿದೆ. ರೈಲ್ವೆ ಹಾಗೂ ಹಾಸ್ಟೆಲ್‌ಗಳಿಂದ ಖರೀದಿ ಆದರೆ ಖಾದಿ ಗ್ರಾಮೋದ್ಯಮಗಳು ಚೇತರಿಸಿಕೊಳ್ಳಲು ನೆರವಾಗಲಿದೆ ಎಂದವರು ಹೇಳಿದ್ದಾರೆ.

2018ರಲ್ಲಿ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿದ ರೀತಿಯಲ್ಲೇ ಬೃಹತ್ ಪ್ರದರ್ಶನ ಆಯೋಜಿಸುವ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಕಳಿಸಲಾಗಿದೆ. ಇಂತಹ ಕ್ರಮಗಳ ಮೂಲಕ ಖಾದಿಗೆ ಹೆಚ್ಚು ಉತ್ತೇಜನ ನೀಡಲು ಸಾಧ್ಯವಾಗಲಿದೆ ಎಂದವರು ಹೇಳಿದ್ದಾರೆ.

# ಶಿಷ್ಯ ವೇತನಕ್ಕಾಗಿ ವೈದ್ಯಕೀಯ ವಿದ್ಯಾರ್ಥಿಗಳ ಬಿಗಿಪಟ್ಟು




ದಾವಣಗೆರೆ, ಅ.5- ಕಳೆದ ಐದು ತಿಂಗಳ ಬಾಕಿ ಶಿಷ್ಯ ವೇತನಕ್ಕೆ ಒತ್ತಾಯಿಸಿ ಜೆಜೆಎಂ ಮೆಡಿಕಲ್ ಕಾಲೇಜಿನ ವೈದ್ಯ ವಿದ್ಯಾರ್ಥಿಗಳು ವಿಭಿನ್ನ ಹೋರಾಟದ ಮುಖೇನ ಸರ್ಕಾರ ಹಾಗೂ ಕಾಲೇಜು ಆಡಳಿತ ಮಂಡಳಿಯ ಗಮನ ಸೆಳೆಯುತ್ತಿರುವುದು ಐದನೇ ದಿನವಾದ ಇಂದೂ ಸಹ ಮುಂದುವರೆದಿತ್ತು.

ಜಯದೇವ ವೃತ್ತದಲ್ಲಿ ಪ್ರತಿಭಟನಾ ಧರಣಿ ಮುಂದುವರೆಸುವ ಮುಖೇನ ಶಿಷ್ಯ ವೇತನಕ್ಕಾಗಿ ವೈದ್ಯ ವಿದ್ಯಾರ್ಥಿಗಳು ಬಿಗಿ ಪಟ್ಟು ಹಿಡಿದಿದ್ದಾರೆ. ಇಂದು ಸಹ ಟೆಂಟ್ ಹಾಕಿಕೊಂಡು ಧರಣಿ ನಡೆಸಿದರು.

ರಾತ್ರಿಯೆಲ್ಲಾ ನಿದ್ದೆಯಿಲ್ಲ, ಜೇಬಿನಲ್ಲಿ ದುಡ್ಡಿಲ್ಲ, ಸೇವೆ ಕೇಳುವಿರಿ ನಿರಂತರ, ಸಂಬಳ ಕೇಳಿದರೆ ನಿರಾಕಾರ, ನಾವು ವೈದ್ಯರು ಧೈರ್ಯಶಾಲಿಗಳು ಆದರೆ ಗುಲಾಮರಲ್ಲ ಎಂಬಿತ್ಯಾದಿ ಘೋಷ ವಾಕ್ಯಗಳ ಮುಖೇನ ಆಕ್ರೋಶ ವ್ಯಕ್ತಪಡಿಸಿದರು.

ಜೀವದ ಹಂಗು ತೊರೆದು ಕೆಲಸ ಮಾಡಿದ್ದೇವೆ. ಕೊರೊನಾ ವೇಳೆಯಲ್ಲಿ ಹಗಲು, ರಾತ್ರಿ ಕೆಲಸ ಮಾಡಿದ್ದೇವೆ. ಕೊರೊನಾ ಕಡಿಮೆಯಾಗುತ್ತಿದ್ದಂತೆ ನಮ್ಮನ್ನು ಕಡೆಗಣಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಕಾಲೇಜಿನ ಆಡಳಿತ ಮಂಡಳಿ ಹಾಗೂ ಸರ್ಕಾರದ ಸಂಬಂಧಿಸಿದ ಇಲಾಖೆಗೆ ಮನವಿ ಮಾಡಿದ್ದರೂ ಪ್ರಯೋಜನ ಆಗಿಲ್ಲ. ಈ ಬಗ್ಗೆ ವಿದ್ಯಾರ್ಥಿಗಳು ಪತ್ರ ಹಾಗೂ ಮನವಿ ಪತ್ರ ಸಲ್ಲಿಕೆ ಮಾಡಿದ್ದರೂ ಕ್ರಮ ಕೈಗೊಂಡಿಲ್ಲ. ಕೋವಿಡ್ ವಿರುದ್ಧದ ಕೆಲಸ ಮಾಡುವ ವೈದ್ಯರಿಗೆ ಸಕಾಲಕ್ಕೆ ವೇತನ ಪಾವತಿ ಮಾಡುವಂತೆ ಎಲ್ಲಾ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ್ದರೂ ಸಹ ಕಳೆದ ಐದು ತಿಂಗಳಿನಿಂದ ವೇತನ ಪಾವತಿಸಿಲ್ಲ. ಇದರಿಂದ ಸಾಕಷ್ಟು ಸಂಕಷ್ಟ ಅನುಭವಿಸುವಂತಾಗಿದೆ ಎಂದು ಕಿರಿಯ ವೈದ್ಯರ ಸಂಘದ ಅಧ್ಯಕ್ಷ ಹೇಮಂತ್ ಅಳಲಿಟ್ಟರು.

ಪ್ರತಿಭಟನೆಯಲ್ಲಿ ಕಿರಿಯ ವೈದ್ಯರ ಸಂಘದ ಕಾರ್ಯದರ್ಶಿ ಸುಬ್ರಮಣ್ಯಂ, ವಿಶಾಲ್, ಉಪಾಧ್ಯಕ್ಷ ಅವಿನ್, ಪಿ.ಬಿ. ಸಹನಾ, ಶಶಿ ಕಿರಣ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಕಾಳಿಕಾದೇವಿ ದೇವಸ್ಥಾನ : ನಾಳೆಯಿಂದ ದಸರಾ



ದಾವಣಗೆರೆ, ಅ.5- ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 7 ರ ಗುರುವಾರದಿಂದ 15 ರ ಶುಕ್ರವಾರದವರೆಗೆ ದಸರಾ ಮಹೋತ್ಸವ ಆಚರಿಸಲಾಗುತ್ತಿದೆ.

ದಸರಾ ಮಹೋತ್ಸವದ ಅಂಗವಾಗಿ ಪ್ರತಿದಿನ ಬೆಳಿಗ್ಗೆ ಪಂಚಾಮೃತಾಭಿಷೇಕ, ದುರ್ಗಾ ಹೋಮ ಮತ್ತು ಪುಷ್ಪಾಲಂಕಾರ ಪೂಜೆಗಳು ನಡೆಯುವವು. ದಿನಾಂಕ 13 ರ ಬುಧವಾರ, ದುರ್ಗಾಷ್ಟಮಿ, ದಿನಾಂಕ 14 ರ ಗುರುವಾರ ಆಯುಧ ಪೂಜೆ, ದಿನಾಂಕ 15 ರ ಶುಕ್ರವಾರ ವಿಜಯದಶಮಿ ಕಾರ್ಯಕ್ರಮಗಳು ನಡೆಯುವವು. ಅಂದು ಗಣಹೋಮ, ದುರ್ಗಾಹೋಮ, ನವಗ್ರಹ ಹೋಮ, ಕಲಶ ವಿಸರ್ಜನೆ ಸಂಜೆ 6.30 ಕ್ಕೆ ಪಾಲಕಿ ಉತ್ಸವದೊಂದಿಗೆ ಬನ್ನಿ ಮುಡಿಯುವುದು, ನಂತರ ಪ್ರಸಾದ ವಿನಿಯೋಗ ಏರ್ಪಡಿಸಿದೆ.

ನವರಾತ್ರಿ ಪ್ರಯುಕ್ತ ಪ್ರತಿದಿನ ಸಂಜೆ 6 ಗಂಟೆಗೆ ಶ್ರೀ ಕಾಳಿಕಾದೇವಿ ಮಹಿಳಾ ಭಜನಾ ಮಂಡಳಿಯಿಂದ ಲಲಿತ ಸಹಸ್ರನಾಮ ಪಾರಾಯಣ, ಸಂಜೆ 7 ರಿಂದ 9 ರವರೆಗೆ ಬಿ. ಪರಮೇಶ್ವರಾಚಾರ್ ಮತ್ತು ಎನ್. ರಮೇಶಚಾರ್ ಇವರಿಂದ ಶ್ರೀದೇವಿಯ ಪಾರಾಯಣ ಏರ್ಪಡಿಸಲಾಗಿದೆ.

# ಬಸ್‌ನಲ್ಲಿ ಸೀಟ್ ಹಿಡಿಯುವ ನೆಪ : ಚೈನ್ ಅಪಹರಣ

ದಾವಣಗೆರೆ, ಅ.5- ಮಹಿಳಾ ಪ್ರಯಾಣಿಕರೋರ್ವರ ಗಮನ ಬೇರೆಡೆ ಸೆಳೆದು ಬ್ಯಾಗ್ ನಲ್ಲಿದ್ದ 13 ಗ್ರಾಂ ತೂಕದ ಬಂಗಾರದ ಚೈನ್ ಅಪಹರಿಸಿರುವ ಘಟನೆ ಹಾಡಹಗಲೇ ಇಲ್ಲಿನ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ಜಗಳೂರಿನ ಗೃಹಿಣಿ ರಷೀದ ಭಾನು ಅವರು ಇದೇ ದಿನಾಂಕ 3ರಂದು ಬೆಳಗ್ಗೆ ಜಗಳೂರಿನಿಂದ ದಾವಣಗೆರೆಗೆ ಮಗಳ ಮನೆಗೆ ಬಂದ ಸಂದರ್ಭದಲ್ಲಿ ನಗರದ ವಿಜಯಲಕ್ಷ್ಮಿ ರಸ್ತೆಯಲ್ಲಿನ ಬಂಗಾರದ ಅಂಗಡಿಯೊಂದರಲ್ಲಿ ಬಂಗಾರದ ಚೈನನ್ನು ರಿಪೇರಿ ಮಾಡಿಸಿಕೊಂಡು ಅದನ್ನು ಬ್ಯಾಗ್ ನಲ್ಲಿಟ್ಟುಕೊಂಡು ಜಗಳೂರಿಗೆ ತೆರಳಲು ಮಧ್ಯಾಹ್ನ ಹೈಸ್ಕೂಲ್ ಮೈದಾನದಲ್ಲಿರುವ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ, ಬಸ್‌ನಲ್ಲಿ ನಿಮಗೆ ಸೀಟ್ ಹಿಡಿಯುತ್ತೇನೆಂದು ನಂಬಿಸಿದ ಅಪರಿಚಿತನು ರಷೀದ ಭಾನು ಬಳಿಯಿದ್ದ ಬ್ಯಾಗ್ ಪಡೆದುಕೊಂಡು, ಬಸ್ ಒಳಗೆ ಹೋಗಿ ಸೀಟ್ ಬಳಿ ಬ್ಯಾಗ್ ಇಟ್ಟು ಬಸ್ ನಿಂದ ಇಳಿದು ಕಾಲ್ಕಿತ್ತಿದ್ದಾನೆ. ನಂತರ ಬಸ್ ಹತ್ತಿದ ರಷೀದ ಭಾನು ಬ್ಯಾಗ್ ನೋಡಿದಾಗ ಅದರಲ್ಲಿದ್ದ ಬಂಗಾರದ ಚೈನ್ ಕಾಣಲಿಲ್ಲ.

# ಕಾರು ಬಹುಮಾನದ ಆಸೆಗೆ ಬಿದ್ದು ವಂಚನೆಗೊಳಗಾದ ನಿವೃತ್ತ ಶಿಕ್ಷಕ

ದಾವಣಗೆರೆ, ಅ.5- ಕಾರು ಬಹುಮಾನದ ಆಸೆಗೆ ಬಿದ್ದ ನಿವೃತ್ತ ಶಿಕ್ಷಕರೋರ್ವರು 73 ಸಾವಿರ ರೂ. ವಂಚನೆಗೊಳಗಾದ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊನ್ನಾಳಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಡಿ.ಆರ್. ಸಿದ್ದಪ್ಪ ಮೋಸ ಹೋದ ನಿವೃತ್ತ ಶಿಕ್ಷಕ. ಕಳೆದ ಸೆಪ್ಟೆಂಬರ್ 7ರಂದು ಅಂಚೆ ಮೂಲಕ ಹರ್ಬಲ್ ಗ್ರೂಪ್ ಆಫ್ ಇಂಡಿಯಾ ಹೆಸರಿನ ಕಂಪನಿಯಿಂದ ಬಂದ ಕೂಪನ್ ಕಾರ್ಡ್‌ನಲ್ಲಿ ಕಂಪನಿಯಿಂದ ಕಾರು ಬಹುಮಾನವಾಗಿ ಬಂದಿದ್ದು, ಕಾರು ಬೇಡವೆಂದರೆ ಬದಲಿಗೆ 14 ಲಕ್ಷದ 40 ಸಾವಿರ ರೂ. ಹಣವನ್ನು ತಮ್ಮ ಬ್ಯಾಂಕ್ ಖಾತೆಗೆ ಹಾಕುವುದಾಗಿ ತಿಳಿಸಲಾಗಿತ್ತು. ಇದನ್ನೇ ನಂಬಿದ ನಿವೃತ್ತ ಶಿಕ್ಷಕ ಸಿದ್ದಪ್ಪ ಅವರು ಕೂಪನ್ ನಲ್ಲಿದ್ದ ದೂರವಾಣಿ ಸಂಖ್ಯೆಗೆ ಕರೆ ಮಾಡಿ ವಿಚಾರಿಸಿದಾಗ, ಅಪರಿಚಿತನು ಕಂಪನಿಯ ಅಧಿಕಾರಿ ಎಂದು ಪರಿಚಿತನಾಗಿ ಕಾರು ಬಹುಮಾನವಾಗಿ ಬಂದಿದ್ದು, ಕಾರು ಬೇಕೆಂದರೆ ಕಂಪನಿಗೆ ಹಣವನ್ನು ಕಟ್ಟಬೇಕೆಂದಿದ್ದಾನಲ್ಲದೇ, ತನ್ನ ಫೋನ್ ಪೇ ನಂಬರ್ ನಿಂದ ಮೆಸೇಜ್ ಕಳುಹಿಸಿದ್ದಾನೆ. ಈತನ ಮಾತನ್ನೇ ನಂಬಿದ ನಿವೃತ್ತ ಶಿಕ್ಷಕ 6,300 ರೂ. ಹಣವನ್ನು ತಮ್ಮ ಫೋನ್ ಪೇ ನಂಬರ್ ನಿಂದ ಕಳುಹಿಸಿದ್ದಾರೆ. ನಂತರ ಕರೆ ಮಾಡಿದ ಅಪರಿಚಿತನು ಬಾಕಿ ಹಣವನ್ನು ಕಳಿಸುವಂತೆ ಹೇಳಿದ್ದರಿಂದ ಅದೇ ದಿನ ಪುನಃ 8,400 ರೂ. ಕಳುಹಿಸಿದ್ದಾರೆ. ಹೀಗೆ ಮಾತುಗಳನ್ನೇ ಕೇಳುತ್ತಾ ಹೋದ ನಿವೃತ್ತ ಶಿಕ್ಷಕನಿಗೆ ತೆರಿಗೆ ಹಣ ಕಟ್ಟುವಂತೆ ಹೇಳಿ ಹಂತ ಹಂತವಾಗಿ ಹಣವನ್ನು ಆನ್ ಲೈನ್ ಮುಖಾಂತರ ಅಪರಿಚಿತನು ದೋಚಿದ್ದಾನೆ.

ಅಲ್ಲದೇ ಹಣ ವರ್ಗಾವಣೆಗೆ ಮ್ಯಾನೇಜರ್‌ಗೆ ಹಣ ಕೊಡಬೇಕು ಎಂದು ಹೇಳಿದಾಗ, ಅನುಮಾನಗೊಂಡ ಸಿದ್ದಪ್ಪ ಅವರು ಬಹುಮಾನದ ಹಣ ಬೇಡ, ನನ್ನ ಹಣವನ್ನೆಲ್ಲಾ ವಾಪಸ್ ನೀಡಿ ಎಂದು ಕೇಳಿದಾಗ, ಹಣವನ್ನು ವಾಪಸ್ ನೀಡುವುದಾಗಿ ಹೇಳಿ ವಂಚಿಸಿರುವುದಾಗಿ ದೂರಿನಲ್ಲಿ ವಿವರಿಸಲಾಗಿದೆ.

**WANTED**

Leading Institute in Davangere invites applications from the prospective and eligible candidates for the following posts

1. Lecturer for BCA and B.Com courses
2. Librarian

Qualifications: as per the UGC norms. Preference will be given to the candidates having higher qualifications

Qualified and interested candidates should send their resumes, colour photo and scanned copy of all relevant documents by Email: applyforjobsatdvg@gmail.com within 7 days from the date of Advertisement

## ರಾಣೇಬೆನ್ನೂರಿನಲ್ಲಿ ನಾಳೆಯಿಂದ ನವರಾತ್ರಿ ಪೂಜೆ, ಅಲಂಕಾರ



ರಾಣೇಬೆನ್ನೂರು, ಅ.5- ನಾಡಿದ್ದು ದಿನಾಂಕ 7 ರ ಗುರುವಾರದಿಂದ 9 ದಿನಗಳ ಕಾಲ ವಿಜಯದಶಮಿ ಹಬ್ಬದ ಅಂಗವಾಗಿ ಕುರುಬಗೇರಿ ಕುದುರಿ ಗಲ್ಲಿಯ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ದೇವಾಂಗ ಸಮಾಜದ ವತಿಯಿಂದ ದಿನವೂ ವಿಶೇಷ ಅಲಂಕಾರ, ಪೂಜೆ ಹಾಗೂ ಶ್ರೀ ಮರಡೆಪ್ಪ ಶಿರಗೂರ ಅವರು ಸಾಯಂಕಾಲ 6 ಗಂಟೆಗೆ ದೇವಿಯ ಪುರಾಣ ಹಾಗೂ ಕಥೆ ಓದುವ ಕಾರ್ಯಕ್ರಮ ಜರುಗುತ್ತದೆ ಎಂದು ಟ್ರಸ್ಟ್ ಕಮಿಟಿ ಅಧ್ಯಕ್ಷ ಅಶೋಕ್ ದುರ್ಗದಶೀಮಿ ಹಾಗೂ ಕಾರ್ಯದರ್ಶಿ ನಾರಾಯಣಪ್ಪ ಹುಲಗೂರ ತಿಳಿಸಿದ್ದಾರೆ.

## ಶ್ರೀಮತಿ ನಾಗಮ್ಮ ನಾನಾನಾಯ್ಕ ನಿಧನ



ದಾವಣಗೆರೆ ಮಹಾನಗರ ಪಾಲಿಕೆ ಆಶ್ರಯ ಶಾಖೆಯ ವ್ಯವಸ್ಥಾಪಕರಾದ ಎನ್. ಗೋವಿಂದನಾಯ್ಕ ಹಾಗೂ ಭಾರತೀಯ ಜೀವ ವಿಮಾ ನಿಗಮದ ಹರಿಹರ ಶಾಖೆಯ ಆಡಳಿತಾಧಿಕಾರಿಯಾದ ಪಿ.ಎನ್. ಚಂದ್ರಶೇಖರನಾಯ್ಕ ಅವರ ತಾಯಿಯವರಾದ

**ಶ್ರೀಮತಿ ನಾಗಮ್ಮ ನಾನಾನಾಯ್ಕ** ಅವರು

ದಿನಾಂಕ 05.10.2021ರ ಮಂಗಳವಾರ ಮಧ್ಯಾಹ್ನ 3.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 95 ವರ್ಷ ವಯಸ್ಸಾಗಿತ್ತು.

ಮೃತರು ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ನಾಗಮ್ಮ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ದಿನಾಂಕ 06.10.2021ರ ಬುಧವಾರ ಬೆಳಿಗ್ಗೆ 10.30 ಗಂಟೆಗೆ ನಗರದ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 96111 05139**

# ಕಾಂಗ್ರೆಸ್ ಕಟ್ಟಿದ್ದನ್ನು ಮಾರುವುದೇ ಬಿಜೆಪಿಯ ಸಾಧನೆ

**ಹರಿಹರ : ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಯುವ ಕಾಂಗ್ರೆಸ್ ಮುಖಂಡ ಮೊಹ್ಮದ್ ಹ್ಯಾರಿಸ್ ನಲ್ಪಾಡ್**



ಹರಿಹರ, ಅ.5- ಕಾಂಗ್ರೆಸ್ 70 ವರ್ಷದ ಜನಪರ ಆಡಳಿತಾವಧಿಯಲ್ಲಿ ಕಟ್ಟಿದ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿರುವುದೇ ಬಿಜೆಪಿ ಸರ್ಕಾರದ ಸಾಧನೆಯಾಗಿದೆ ಎಂದು ಯುವ ಕಾಂಗ್ರೆಸ್ ಮುಖಂಡ ಮೊಹ್ಮದ್ ಹ್ಯಾರಿಸ್ ನಲ್ಪಾಡ್ ಆರೋಪಿಸಿದರು.

ಜಿಲ್ಲಾ ಯುವ ಕಾಂಗ್ರೆಸ್‌ನಿಂದ ಗಾಂಧಿ ಜಯಂತಿಯಂದು ನಗರದ ಗಾಂಧಿ ವೃತ್ತದಲ್ಲಿ ಆಯೋಜಿಸಿದ್ದ ಸಾಂಕೇತಿಕ ಉಪವಾಸ ಸತ್ಯಾಗ್ರಹದಲ್ಲಿ ಮಾತನಾಡಿದ ಅವರು ವಿಮಾನ ನಿಲ್ದಾಣ, ಎಲ್‌ಐಸಿ, ರೈಲ್ವೆ ಸೇರಿದಂತೆ ಕಾಂಗ್ರೆಸ್ ಕಟ್ಟಿ ಬೆಳೆಸಿದ ನೂರಾರು ಬೃಹತ್ ಸಂಸ್ಥೆಗಳನ್ನು ಬಿಜೆಪಿ ಖಾಸಗೀಕರಣಗೊಳಿಸುತ್ತಿದೆ ಎಂದರು.

'ಅಚ್ಚೇ ದಿನ್ ಆಯೇಂಗೆ' ಎಂದು ಬಿಜೆಪಿ ಅಧಿಕಾರಕ್ಕೇರಿತ್ತು, ಆದರೀಗ ಪೆಟ್ರೋಲ್, ಡೀಸೆಲ್ ಸೇರಿದಂತೆ ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರಿದೆ. ಜನರೀಗ ಅಚ್ಚೇ ದಿನ್ ಬೇಡ, ಪುರಾನೆ ದಿನ್ ಸಾಕೆಂದು ಕೇಳುವಂತಾಗಿದೆ ಎಂದರು.

ಜಯನಗರ ಶಾಸಕಿ ಸೌಮ್ಯರೆಡ್ಡಿ ಮಾತನಾಡಿ, ಬಂಡವಾಳ ಶಾಹಿಗಳ ಪರವಿರುವ ಬಿಜೆಪಿ ಸರ್ಕಾರ, ಜನಸಾಮಾನ್ಯರ ಹಿತ ಕಾಯಲು ಸಾಧ್ಯವಿಲ್ಲ. ಬ್ರಿಟಿಷರನ್ನು ಭಾರತದಿಂದ ತೊಲಗಿಸಿದ ಗಾಂಧೀಜಿಯವರ ಜನ್ಮದಿನದಂದು ಬಿಜೆಪಿ ತೊಲಗಿಸುವ ಪ್ರತಿಜ್ಞೆ ಮಾಡಬೇಕಿದೆ ಎಂದರು.

ಶಾಸಕ ಎಸ್.ರಾಮಪ್ಪ ಮಾತನಾಡಿ, ಕೋಮು ದ್ವೇಷ ಬೆಳೆಸಿ ಸಮಾಜದಲ್ಲಿ ಒಡಕು ಉಂಟು ಮಾಡಿ ರಾಜಕೀಯ ಲಾಭ ಗಳಿಸುವುದೇ ಬಿಜೆಪಿಯ ತಂತ್ರ. ಆಡಳಿತ ನಡೆಸಿದ ಅನುಭವ ಆ ಪಕ್ಷದವರಿಗಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಸಿದ್ದೇ ಬಿಜೆಪಿಯ ಸಾಧನೆಯಾಗಿದೆ ಎಂದರು.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ನಿಖಿಲ್ ಕೊಂಡಜ್ಜಿ ಮಾತನಾಡಿ, ಹಿಂದೂ ಪರ ಎಂದು ಹೇಳುತ್ತಲೇ ಬಿಜೆಪಿ ಸರ್ಕಾರ ನಂಜನಗೂಡಿನ ದೇವಸ್ಥಾನ ಧ್ವಂಸ ಮಾಡಿದೆ. ಗಾಂಧೀಜಿಯನ್ನು ಹೊಗಳುತ್ತಲೇ ಗೂಡ್ಸೆಯನ್ನು ಆರಾಧಿಸುವ ಬಿಜೆಪಿಯವರದ್ದು ದ್ವಿಮುಖ ನೀತಿಯಾಗಿದೆ ಎಂದರು.

ಎಪಿಎಂಸಿ ಅಧ್ಯಕ್ಷ ಮಂಜುನಾಥ್ ಪಟೇಲ್, ಹೊನ್ನಾಳಿ ಮಾಜಿ ಶಾಸಕ ಶಾಂತನಗೌಡ್ರು, ಜಿಪಂ ಮಾಜಿ ಸದಸ್ಯೆ ಅರ್ಚನಾ ಬಸವರಾಜ್, ತಾಪಂ ಮಾಜಿ ಸದಸ್ಯ ಎಚ್.ಎಚ್.ಬಸವರಾಜ್ ಬೆಳ್ಳೂಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ.ಹನುಮಂತಪ್ಪ, ಎಂ.ಬಿ.ಆಬಿದ್ ಅಲಿ, ಮುಖಂಡರಾದ ಸೈಯದ್ ಏಜಾಜ್, ಬಿ.ರೇವಣಸಿದ್ದಪ್ಪ, ಜಿ.ಎಚ್.ಮರಿಯೋಜಿರಾವ್, ಸೈಯದ್ ಸನಾಉಲ್ಲಾ, ತಿಪ್ಪೇಶಿ, ಶಾಕೀರ್ ಸನದಿ, ಪಿ.ಟಿ. ಭರತ್‌ನಾಯ್ಕ್, ಮಂಜುನಾಥ್ ಎಚ್.ಎಸ್., ಸುರಭಿ ದ್ವಿವೇದಿ, ನಾಗರಾಜ್ ಭಂಡಾರಿ, ರಂಜಿತ್, ಭರತ್ ಇತರರಿದ್ದರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte